ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

SHRIDEVI EDUCATION




ಮಾಸಪತ್ರಿಕೆ
ಸಂಪುಟ 1, ಸಂಚಿಕೆ 10
ಆಗಸ್ಟ್ 2023
SHRIDEVI ANTARANGA
Monthly Magazine



ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

ಹಸಿವಿನಿಂದ ಬಳಲುತ್ತಿರುವ ಪ್ರಪಂಚದ ಎಂಬತ್ತು ರಾಷ್ಟ್ರಗಳ ಪೈಕಿ ಭಾರತ ಅರವತ್ತೇಳನೆಯ ಸ್ಥಾನದಲ್ಲಿದೆ. ಉತ್ತರ ಕೊರಿಯಾ ಮತ್ತು ಸುಡಾನ್ ದೇಶಗಳಿಗಿಂತ ನಮ್ಮಲ್ಲಿ ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚು.

## ದೇಶದ ಆಡಳಿತ ವ್ಯವಸ್ಥೆ ಜನತೆಗೆ ಉತ್ತರದಾಯಿಯಾಗಿರಬೇಕು




ವಿಧಾನಪರಿಷತ್ತಿನ ಸದಸ್ಯರೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ, ದಲಿತ ಕವಿ ಎಂದು ಖ್ಯಾತರಾಗಿದ್ದ ದಿವಂಗತ ಡಾ.ಸಿದ್ದಲಿಂಗಯ್ಯ ಅವರು ಭಾರತದ ಸ್ವಾತಂತ್ರ್ಯ ಕುರಿತು ಬರೆದ ಕವನ ನನಗೆ ಅಚ್ಚುಮೆಚ್ಚು. ಸ್ವತ: ಕವಿ ಸಿದ್ದಲಿಂಗಯ್ಯ ಅವರೇ ದೂರದರ್ಶನದಲ್ಲಿ ಈ ಕವನವನ್ನು ಹತ್ತಾರು ಬಾರಿ ವಾಚನ ಮಾಡಿದ್ದಾರೆ. ಇನ್ನು ನಾವು ಸಾರ್ವಜನಿಕ ಜೀವನದಲ್ಲಿದ್ದಾಗ ಮಾಡಿದ ಅನೇಕ ರ‍್ಯಾಲಿಗಳಲ್ಲಿ ಯುವಕ\ಯುವತಿಯರು ತಪ್ಪದೇ ಈ ಕವನವನ್ನು ಹಾಡುತ್ತಿದ್ದರು. ಕರ್ನಾಟಕದ ಕ್ರಾಂತಿಕಾರಿ ಗೀತೆಗಳಲ್ಲೊಂದು ಎಂಬಷ್ಟು ಈ ಕವನ ಜನಪ್ರಿಯವಾಗಿದೆ. ನಾಡಿನ ಪ್ರಜ್ಞಾವಂತರು ಈ ಕವನದ ಆಶಯವನ್ನು ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುತ್ತಾರೆ. ಕವನದ ಕೆಲವು ಸಾಲುಗಳು ಹೀಗಿವೆ.

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
.........................
ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ
ಸಮತೆಯ ಹೂವನು ಅರಳಿಸಲಿಲ್ಲ

ಇಂದು 77ನೆಯ ಸ್ವಾತಂತ್ರ್ಯೋತ್ಸವ ಆಚರಣಾ ಸಂದರ್ಭದಲ್ಲಿ ಸೂಕ್ಷ್ಮಪ್ರಜ್ಞೆಯಿಂದ ದೇಶವನ್ನು ಅವಲೋಕಿಸಿದರೆ, ನಾವಿನ್ನೂ ಬಹುಪಾಲು ಜನರಿಗೆ ಮೂಲಭೂತ ಅವಶ್ಯಕತೆಗಳನ್ನು ಕಲ್ಪಿಸಿಕೊಟ್ಟಿಲ್ಲ ಎಂದೇ ಹೇಳಬೇಕಾಗಿದೆ. ಬಡವರಿಗೆ ಮತ್ತು ಶೋಷಿತರಿಗೆ ಈ ಸ್ವಾತಂತ್ರ್ಯದಿಂದ ಆಗಿರುವ ಉಪಯೋಗವಾದರೂ ಏನು ಎಂದು ಪ್ರಶ್ನೆ ಮಾಡಬೇಕಾಗಿದೆ.

ವಿಶ್ವಬ್ಯಾಂಕ್ ಡೇಟಾವೊಂದರ ಪ್ರಕಾರ, ಆಫ್ರಿಕಾ ದೇಶಕ್ಕಿಂತ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಸಂಖ್ಯೆ ಭಾರತದಲ್ಲಿ ಹೆಚ್ಚಿದೆ. ಹಸಿವಿನಿಂದ ಬಳಲುತ್ತಿರುವ ಪ್ರಪಂಚದ ಎಂಬತ್ತು ರಾಷ್ಟ್ರಗಳ ಪೈಕಿ ಭಾರತ ಅರವತ್ತೇಳನೆಯ ಸ್ಥಾನದಲ್ಲಿದೆ. ಉತ್ತರ ಕೊರಿಯಾ ಮತ್ತು ಸುಡಾನ್ ದೇಶಗಳಿಗಿಂತ ನಮ್ಮಲ್ಲಿ ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚು. 2005ರ 'ವಿಶ್ವ ಆರೋಗ್ಯ ಸಂಸ್ಥೆ' ನೀಡಿದ ವರದಿಯ ಪ್ರಕಾರ ಭಾರತದಲ್ಲಿ ಶೇಕಡ 60ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಅದೇ ಆಫ್ರಿಕಾದ ಉಪ–ಸಹಾರನ್ ಪ್ರಾಂತ್ಯದಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರ ಪ್ರಮಾಣ ಶೇಕಡ 20 ಇದೆ. ಇಂತಹ ನೈಜ ಅಂಕಿ–ಅಂಶಗಳಿಂದ ದೇಶದಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಸ್ಪಷ್ಟ ಚಿತ್ರಣ ದೊರೆಯುತ್ತದೆ.

ಕರ್ನಾಟಕ ರಾಜ್ಯದಲ್ಲಿ 2011ರ ಜನಗಣತಿಯ ಪ್ರಕಾರ 13.40 ದಶಲಕ್ಷ ಕುಟುಂಬಗಳಿದ್ದು, ಅದರಲ್ಲಿ 1.20 ಕೋಟಿ ಕುಟುಂಬಗಳಿಗೆ ಈಗ ಪ್ರಾರಂಭವಾಗಿರುವ ಅನ್ನಭಾಗ್ಯ ಯೋಜನೆಯ ಪ್ರಯೋಜನ ದೊರಕಿದೆ ಎಂದು ರಾಜ್ಯ ಸರ್ಕಾರದ ಅಂಕಿ ಅಂಶ ಹೇಳುತ್ತದೆ. ವಿಶ್ವದ ಅತಿ ಶ್ರೀಮಂತರ ಪಟ್ಟಿಯಲ್ಲೂ ಭಾರತಕ್ಕೆ ಅಗ್ರಸ್ಥಾನವಿದೆ. ಅದೇ ರೀತಿ ಹಸಿವು, ಬಡತನ, ಅನಾರೋಗ್ಯ, ಅನಕ್ಷರತೆ ಮತ್ತು ಅಪೌಷ್ಟಿಕತೆಯಿಂದ ಬಳಲುವವರ ಪಟ್ಟಿಯಲ್ಲೂ ಭಾರತಕ್ಕೆ ಅಗ್ರಸ್ಥಾನವೇ ದೊರಕಿದೆ. ಇದಕ್ಕೆ ಅನೇಕ ಕಾರಣಗಳಿರಬಹುದು.

▶▶ 2ನೇ ಪುಟಕ್ಕೆ...

## ಹಲ್ಲುಗಳ ಆರೈಕೆ ಮೂಲಕ ಆರೋಗ್ಯ ರಕ್ಷಣೆ ನಿಮ್ಮ ಕೈಯಲ್ಲಿ

**ಬಾಯಿಯ ಆರೋಗ್ಯಕ್ಕೆ ಸಂಬಂಧಿಸಿರುವ ಇತರ ಪರಿಸ್ಥಿತಿಗಳು ತಿನ್ನುವ ಅಸ್ವಸ್ಥತೆಗಳು, ಸಂಧಿವಾತ, ಕೆಲವು ಕ್ಯಾನ್ಸರ್‌ಗಳು ಮತ್ತು ಬಾಯಿ ಒಣಗುವುದು (Dry mouth - Sjogren's syndrome) ಉಂಟುಮಾಡುವ ಪ್ರತಿರಕ್ಷಣಾ ವ್ಯವಸ್ಥೆಯ ಅಸ್ವಸ್ಥತೆಗಳನ್ನು ಒಳಗೊಂಡಿರುತ್ತವೆ.**



■ ಡಾ. ರವೀಂದ್ರ ಪಿ.
ದಂತ ವೈದ್ಯರು,
ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ

### ನಿಮ್ಮ ಆರೋಗ್ಯದ ಗುಟ್ಟು ಬಾಯಿಯಲ್ಲಿದೆ



ನಿಮ್ಮ ಹಲ್ಲುಗಳನ್ನು ಸುತ್ತುವರಿದಿರುವ ವಸಡುಗಳು ಅವನ್ನು ಗಟ್ಟಿಯಾಗಿ ಅವುಗಳ ಸ್ಥಳದಲ್ಲಿ ಹಿಡಿದಿಟ್ಟಿರುತ್ತವೆ. ನಿಮ್ಮ ವಸಡುಗಳನ್ನು ಆರೋಗ್ಯಪೂರ್ಣವಾಗಿಡಲು ಬಾಯಿಯ ಶುಚಿತ್ವ ಅತ್ಯಗತ್ಯ. ಬಾಯಿಯ ಆರೋಗ್ಯವು ನೀವು ತಿಳಿದಿರುವುದಕ್ಕಿಂತ ಬಹಳ ಮುಖ್ಯವಾಗಿದೆ.

### ನಿಮ್ಮ ಬಾಯಿ, ಹಲ್ಲು ಮತ್ತು ವಸಡುಗಳ ಆರೋಗ್ಯವು ನಿಮ್ಮ ಸಾಮಾನ್ಯ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

ಬಾಯಿಯ ಆರೋಗ್ಯವು ಒಟ್ಟಾರೆ ಆರೋಗ್ಯದ ಬಗ್ಗೆ ಸುಳಿವುಗಳನ್ನು ನೀಡುತ್ತದೆ ಎಂಬುದು ನಿಮಗೆ ತಿಳಿದಿದೆಯೇ? ಅಥವಾ ಬಾಯಿಯಲ್ಲಿನ ಸಮಸ್ಯೆಗಳು ದೇಹದ ಉಳಿದ ಭಾಗಗಳ ಮೇಲೆ ಹೇಗೆ ಪರಿಣಾಮ ಬೀರಬಹುದು? ಬಾಯಿಯ ಆರೋಗ್ಯ ಒಟ್ಟಾರೆ ಆರೋಗ್ಯದ ನಡುವಿನ ಸಂಪರ್ಕದ ಸೇತುವೆ. ಈ ಬಗ್ಗೆ ಇನ್ನಷ್ಟು ತಿಳಿದುಕೊಂಡು ರಕ್ಷಿಸಿಕೊಳ್ಳಬೇಕಿದೆ.

### ಬಾಯಿಯ ಆರೋಗ್ಯ ಹಾಗೂ ದೇಹದ ಆರೋಗ್ಯಕ್ಕೂ ನಡುವಿನ ಸಂಬಂಧ ಏನು?

ದೇಹದ ಆರೋಗ್ಯದಲ್ಲಿ ಬಾಯಿಯ ಆರೋಗ್ಯ ಅತ್ಯಂತ ಮುಖ್ಯವಾದದ್ದು. ನಮ್ಮ ಲಾಲಾರಸದ ಹೊರತಾಗಿ ಹಲವಾರು ಸೂಕ್ಷ್ಮಜೀವಿಗಳಿವೆ. ಯಾವಾಗ ಬಾಯಿಯಲ್ಲಿ ಸಂಗ್ರಹವಾದ ಆಹಾರದ ಕಣ ಕೊಳೆತು ಈ ಸೂಕ್ಷ್ಮಜೀವಿಗಳ ಸಂಖ್ಯೆ ಹೆಚ್ಚಾಗುವುದೋ ಆಗ ದುರ್ವಾಸನೆ ಪ್ರಾರಂಭವಾಗುತ್ತದೆ. ಇಲ್ಲಿಂದ ಸೋಂಕು ನರವ್ಯೂಹದ ಮೂಲಕ ದೇಹದ ಹಲವಾರು ಅಂಗಗಳಿಗೆ ಹರಡಿಕೊಳ್ಳಬಹುದು. ಅದಕ್ಕಾಗಿ ಬಾಯಿಯ ಸ್ವಚ್ಛತೆ ಬಹಳ ಮಹತ್ವದ್ದಾಗಿದೆ.

ದೇಹದ ಇತರ ಭಾಗಗಳಂತೆ, ನಿಮ್ಮ ಬಾಯಿಯು ಸಹ ಬ್ಯಾಕ್ಟೀರಿಯಾದಿಂದ ತುಂಬಿರುತ್ತದೆ. ಇವು ಹಾನಿಕಾರವಾಗಿರುವುದಿಲ್ಲ. ನಮ್ಮ ಜೀರ್ಣಾಂಗ ಮತ್ತು ಉಸಿರಾಟದ ಪ್ರದೇಶಗಳಿಗೆ ಬ್ಯಾಕ್ಟೀರಿಯಾಗಳು ಪ್ರವೇಶವಾಗಿ ಕೆಲವು ರೋಗಗಳಿಗೆ ಕಾರಣವಾಗಬಹುದು.

ಸಾಮಾನ್ಯವಾಗಿ ದೇಹದ ಮತ್ತು ಬಾಯಿಯ ಆರೋಗ್ಯ ರಕ್ಷಣೆ ಬಹಳ ಮುಖ್ಯ. ಉದಾಹರಣೆಗೆ ಹೇಳುವುದಾದರೆ ಪ್ರತಿದಿನ ಹಲ್ಲುಜ್ಜುವುದು ಹಾಗೂ ಫ್ಲೋಸಿಂಗ್ ಮಾಡುವುದರಿಂದ ಬ್ಯಾಕ್ಟೀರಿಯಾವನ್ನು ನಿಯಂತ್ರಣದಲ್ಲಿಡಬಹುದು. ಆದಾಗ್ಯೂ, ಸರಿಯಾದ ನೈರ್ಮಲ್ಯವಿಲ್ಲದೆ, ಬ್ಯಾಕ್ಟೀರಿಯಾವು ಹಲ್ಲಿನ ಹುಳುಕು ಮತ್ತು ವಸಡು ಕಾಯಿಲೆಯಂತಹ ಬಾಯಿಯ ಸೋಂಕುಗಳಿಗೆ ಕಾರಣವಾಗಬಹುದು.

### ಬಾಯಿಯ ಕಾಯಿಲೆಗಳು ಹಲ್ಲಿನ ಕ್ಷಯ, ಪರಿದಂತದ (ವಸಡು)ರೋಗ, ಹಲ್ಲಿನ ನಷ್ಟ, ಬಾಯಿಯ ಕ್ಯಾನ್ಸರ್, ಓರೊ–ಡೆಂಟಲ್ ಟ್ರಾಮಾ ಸೇರಿದಂತೆ ಹಲವಾರು ರೋಗಗಳಿಗೆ ಕಾರಣವಾಗುತ್ತದೆಯೇ?

ಹೌದು ಕೆಲವು ಔಷಧಗಳು – ಉದಾಹರಣೆಗೆ ಡಿಕನ್‌ಜಸ್ಟೆಂಟ್‌ಗಳು(Decongestants), ಆ್ಯಂಟಿಹಿಸ್ಟಮೈನ್‌ಗಳು, ನೋವು ನಿವಾರಕಗಳು, ಮೂತ್ರವರ್ಧಕಗಳು ಮತ್ತು ಖಿನ್ನತೆ ಶಮನಕಾರಿಗಳು – ಲಾಲಾರಸದ ಹರಿವನ್ನು ಕಡಿಮೆ ಮಾಡಬಹುದು.

ಲಾಲಾರಸವು ಆಹಾರವನ್ನು ತೊಳೆಯುತ್ತದೆ ಮತ್ತು ಬಾಯಿಯಲ್ಲಿ ಬ್ಯಾಕ್ಟೀರಿಯಾದಿಂದ ಉತ್ಪತ್ತಿಯಾಗುವ ಆಮ್ಲಗಳನ್ನು ತಟಸ್ಥಗೊಳಿಸುತ್ತದೆ. ರೋಗಕ್ಕೆ ಕಾರಣವಾಗುವ ಸೂಕ್ಷ್ಮ ಜೀವಿಗಳಿಂದ ನಿಮ್ಮನ್ನು ರಕ್ಷಿಸಲು ಸಹಾಯ ಮಾಡುತ್ತದೆ.

▶▶ 4ನೇ ಪುಟಕ್ಕೆ...



# ದೇಶದ ಆಡಳಿತ ವ್ಯವಸ್ಥೆ ಜನತೆಗೆ ಉತ್ತರದಾಯಿಯಾಗಿರಬೇಕು

▶▶ ಮೊದಲನೇ ಪುಟದಿಂದ...

ಅದನ್ನು ವಿಶ್ಲೇಷಿಸುವುದು ಇಲ್ಲಿನ ಉದ್ದೇಶವಲ್ಲ. ಸಂವಿಧಾನ ನಿರ್ಮಾಪಕರು ಕಂಡಿದ್ದ ಸಮಾನತೆಯ ಸಮಾಜ ನಿರ್ಮಾಣದ ಕಾರ್ಯದಲ್ಲಿ ನಮಗೆ ಯಶಸ್ಸು ದೊರಕಿಲ್ಲ ಎನ್ನುವುದು ಮುಖ್ಯವಾದ ಸಂಗತಿಯಾಗಬೇಕು.

ದೇಶವನ್ನು ಕುರಿತು ಭಾವನಾತ್ಮಕವಾಗಿ ಹಾಡಿ, ನಲಿದು ದೊಡ್ಡ ಮಾತುಗಳಿಂದ ಕೇಳುಗರನ್ನು ಮೋಡಿ ಮಾಡಿದರೆ ಪ್ರಯೋಜನವಿಲ್ಲ. ಭಾರತದಲ್ಲಿ 76 ವರ್ಷಗಳಿಂದಲೂ ಯಾವುದೇ ಪ್ರಗತಿ ಆಗಿಲ್ಲವೆಂಬ ನಕಾರಾತ್ಮಕ ಮಾತುಗಳನ್ನು ನಾವು ಹೇಳುತ್ತಿಲ್ಲ. ಹಾಗೆ ನೋಡಿದರೆ ಆಹಾರ ಉತ್ಪಾದನೆ, ಸಾರ್ವತ್ರಿಕ ಶಿಕ್ಷಣ, ಸಾಂಕ್ರಾಮಿಕ ರೋಗಗಳಿಂದ ಮುಕ್ತ ಮಾಡಿರುವುದು, ಮಹಿಳಾ ಸಬಲೀಕರಣ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವುದು ಅಂಕಿ–ಅಂಶಗಳಿಂದ ತಿಳಿಯುತ್ತದೆ. ಸ್ವಾತಂತ್ರ್ಯಾನಂತರ ದೇಶದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ನಾಶವಾಗದೇ ಉಳಿದಿವೆ. ಭಾರತದ ಸಮಗ್ರತೆ ಮತ್ತು ಐಕ್ಯತೆ ಭದ್ರವಾಗಿರುವುದು ಸಂತೋಷದ ವಿಚಾರ. ಪ್ರಜಾಪ್ರಭುತ್ವದ ಆಶಯವಾದ ವ್ಯಕ್ತಿ ಸ್ವಾತಂತ್ರ್ಯ ಅನಿರ್ಬಂಧಿತವಾಗಿರುವುದು ಸಮಾಧಾನಕರ ವಿಚಾರ. ಅದರಿಂದಾಗಿ ದೇಶದ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗಣನೀಯವಾದ ಸಾಧನೆಯಾಗಿರುವುದನ್ನು ಗಮನಿಸಬಹುದು.

ವೈದ್ಯನಾದ ಕಾರಣ ನಾನು ಅಭಿವೃದ್ಧಿಯನ್ನು ಆ ದೃಷ್ಟಿಯಿಂದಲೇ ನೋಡಿದ್ದೇನೆ. ಅದಕ್ಕೆ ಕೆಲವೊಂದು ಉದಾಹರಣೆ ಕೊಡಬಹುದಾಗಿದೆ. 1970ರಲ್ಲಿ ದೇಶದಲ್ಲಿ ಮನುಷ್ಯರ ಸರಾಸರಿ ಆಯುಷ್ಯ ಪ್ರಮಾಣ 49.7ರಷ್ಟಿತ್ತು. 2018ಕ್ಕೆ ಅದು 60.7ಕ್ಕೆ ಜಿಗಿದಿದೆ. 1994ರಲ್ಲಿ ಶಿಶುವಿನ ಮರಣ ಸಾವಿರಕ್ಕೆ 74ಕ್ಕಿದ್ದರೆ 2016ರಲ್ಲಿ ಈ ಪ್ರಮಾಣ 34.6ಕ್ಕೆ ಇಳಿದಿದೆ. ಅದೇ ರೀತಿ ಹೆರಿಗೆಯ ನಂತರ ತಾಯಂದಿರ ಮರಣ 2007–08ರಲ್ಲಿ ಲಕ್ಷಕ್ಕೆ 212 ಇತ್ತು. 2018ಕ್ಕೆ ಅದು 190ಕ್ಕೆ ಇಳಿದಿದೆ.

ದೇಶ ತನ್ನ ರಾಷ್ಟ್ರೀಯ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ವಾಸ್ತವಸ್ಥಿತಿಯನ್ನು ಗಮನಿಸಿಕೊಂಡು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅತ್ಯುನ್ನತ ಸ್ಥಾನದಲ್ಲಿರುವವರು ಕೊಡುವ ಅಂಕಿ–ಅಂಶಗಳಿಂದ ದೇಶದಲ್ಲಿ ಎಲ್ಲವೂ ಚೆನ್ನಾಗಿದೆ ಎಂಬ ಭಾವನೆ ಬೆಳೆಸಿಕೊಂಡರೆ ನಮ್ಮಷ್ಟು ಮೂರ್ಖರು ಯಾರೂ ಇರುವುದಕ್ಕೆ ಸಾಧ್ಯವಿಲ್ಲ. ಇದೇ ಅಂಕಿ–ಅಂಶಗಳಿಂದ ಮಾಧ್ಯಮಗಳು ಸಹ ಮತ್ತೆ ಮತ್ತೆ ಹೇಳುತ್ತಾ ಆಡಳಿತಗಾರರಿಗೆ ಜಯಕಾರ ಹಾಕುತ್ತವೆ. ವಿಶ್ವ ಆರೋಗ್ಯ ಸಂಸ್ಥೆಯಂತಹ ಸ್ವತಂತ್ರ ಸಂಸ್ಥೆಗಳು ನೀಡುವ ಅಂಕಿ–ಅಂಶಗಳು ಮತ್ತು ಅಧ್ಯಯನ ವರದಿಗಳು ದೇಶದ ನೈಜ ಚಿತ್ರಣವನ್ನು ಕಟ್ಟಿಕೊಡುತ್ತವೆ.

ಅಭಿವೃದ್ಧಿ ವಿಚಾರದಲ್ಲಿ ಕಾರ್ಯಾಂಗವೇ ಅತ್ಯಂತ ಪ್ರಮುಖವಾದ ಅಂಗ. ನೀವು ಎಷ್ಟೇ ಒಳ್ಳೆಯ ಕಾನೂನು ರೂಪಿಸಿದರೂ ಅದರ ಅನುಷ್ಠಾನ ಸರಿಯಾಗಿ ಅಂದರೆ ಭ್ರಷ್ಟಾಚಾರ ರಹಿತವಾಗಿ ಆಗದಿದ್ದರೆ ಆ ಶಾಸನದಿಂದ ಏನು ಪ್ರಯೋಜನ ಈಗ ಕಾರ್ಯಾಂಗ ಜನರ ಮತ್ತು ಸಂವಿಧಾನ ನಿರ್ಮಾಪಕರ ಆಶಯದಂತೆ ಕೆಲಸ ಮಾಡುತ್ತಿದೆಯೇ?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾನ್ಯ ಜನತೆಗೆ ಆದ್ಯತೆ ದೊರೆಯಬೇಕು. ಕುಗ್ರಾಮದ ರೈತ ಸಹಜವಾಗಿ ಆಗಬೇಕಾದ ತನ್ನ ಕೆಲಸಕ್ಕೆ ತಹಸೀಲ್ದಾರ್ ಕಚೇರಿಗೆ ಹೋದರೆ, ಅಲ್ಲಿನ ಅಧಿಕಾರಿ ಆತನನ್ನು ಕುಳ್ಳಿರಿಸಿ ಕೆಲಸ ಮಾಡಿಕೊಡುವ ವಾತಾವರಣ ನಿರ್ಮಾಣವಾಗಬೇಕಾಗಿತ್ತು. ಈಗ ಯಾವ ಪರಿಸ್ಥಿತಿಯಿದೆ ಎಂಬುದನ್ನು ನೆನಪಿಸಿಕೊಳ್ಳಿ. ರೈತನನ್ನು ಕುಳ್ಳಿರಿಸಿ ಮಾತನಾಡುವುದು ಹೋಗಲಿ ಏಜೆಂಟ್‌ಯಿಲ್ಲದೆ ಆತ ಸಂಬಂಧಪಟ್ಟ ಅಧಿಕಾರಿಗಳನ್ನು ನೋಡಲೂ ಸಾಧ್ಯವಾಗದ ಪರಿಸ್ಥಿತಿಯಿದೆ. ಇದಕ್ಕೆ ಮುಖ್ಯ ಕಾರಣ, ಸ್ವಾತಂತ್ರ್ಯ ಬಂದ ತರುಣದಲ್ಲಿ ನಮ್ಮ ನಾಯಕರು ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಕಣ್ಣುಮುಚ್ಚಿ ಅನುಸರಿಸಿದರು. ಬ್ರಿಟಿಷರ ಕಾಲದಲ್ಲಿ ಐ.ಸಿ.ಎಸ್. ಹುದ್ದೆಗೆ ಬಂದವರೂ ಕಂದಾಯ ಮತ್ತು ನ್ಯಾಯಾಂಗದ ಮುಖ್ಯಸ್ಥರಾಗಿರುತ್ತಿದ್ದರು. ಪ್ರತ್ಯೇಕವಾದ ಪೊಲೀಸ್ ವ್ಯವಸ್ಥೆಯಿತ್ತು. ಈ ಅಧಿಕಾರಿಗಳು ತಮ್ಮ ಧಣಿಗಳಾದ ಬ್ರಿಟಿಷರ ಸಾಮ್ರಾಜ್ಯಕ್ಕೆ ಋಣಿಯಾಗಿರುತ್ತಿದ್ದರು. ಮೂವತ್ತರ ದಶಕದಲ್ಲಿ ಭಾರತದಲ್ಲಿದ್ದ ಬಡತನ, ಅನಾರೋಗ್ಯ, ಅನಕ್ಷರತೆ, ಭೀಕರ ನಿರುದ್ಯೋಗ, ಸಾಮಾಜಿಕ ಅಸಮಾನತೆ ಮೊದಲಾದ ವಿಚಾರಗಳ ಬಗ್ಗೆ ಮಹಾತ್ಮ ಗಾಂಧೀಜಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರಂಥವರು ಅಂದಿನ ಹಿರಿಯ ಅಧಿಕಾರಿಗಳ ಗಮನಕ್ಕೆ ಈ ವಿಚಾರಗಳನ್ನು ತರುತ್ತಿದ್ದರು. ಜಿಲ್ಲಾಡಳಿತದ ವ್ಯವಸ್ಥೆಯ ಹೊಣೆ ಹೊತ್ತಿದ್ದ ಐ.ಸಿ.ಎಸ್. ಅಧಿಕಾರಿಗಳು ಎಲ್ಲವೂ ಚೆನ್ನಾಗಿದೆ ಎಂದೇ ಹೇಳುತ್ತಿದ್ದರು. ಇಂದು ಪರಿಸ್ಥಿತಿ ಪೂರ್ಣವಾಗಿ ಬದಲಾಗಿದೆಯೇ? ನಿರಂತರವಾಗಿ ಶೋಷಿತ ಸಮಾಜದ ಮೇಲೆ ದಾಳಿ ನಡೆಯುತ್ತಿದ್ದರೂ ಆಡಳಿತ ಶಾಹಿ ತಲೆ ಕೆಡಿಸಿಕೊಳ್ಳುವುದಿಲ್ಲ. ಮಾಧ್ಯಮಗಳು ಮತ್ತು ನ್ಯಾಯಾಂಗವು ಕ್ರಿಯಾಶೀಲವಾಗಿರುವ ಕಾರಣ ಜನರು ಸ್ವಲ್ಪವಾದರೂ ಉಸಿರಾಡುತ್ತಿದ್ದಾರೆ.

ಸ್ವಾತಂತ್ರ್ಯ ಬಂದ ತಕ್ಷಣ ಭಾರತದ ನಾಯಕರು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಅನುಸರಿಸದೇ ಆಯಾಯ ಪ್ರಾಂತ್ಯಗಳ ಪರಂಪರೆಗೆ ತಕ್ಕಂತಹ ಆಡಳಿತ ವ್ಯವಸ್ಥೆಯನ್ನು ರೂಪಿಸಿದ್ದರೆ ದೇಶದ ಭವಿಷ್ಯವೇ ಬದಲಾಗುತ್ತಿತ್ತು. ದೇಶದ ಎಲ್ಲಾ ರಾಜ್ಯಗಳನ್ನು ಒಂದೇ ನಮೂನೆಯಲ್ಲಿ ನೋಡಬೇಕಾಗಿರಲಿಲ್ಲ. ಪ್ರಧಾನಿ ಜವಾಹರಲಾಲ್ ನೆಹರೂ, ಉಪ ಪ್ರಧಾನಿ ಹಾಗೂ ಗೃಹಸಚಿವರಾಗಿದ್ದ ವಲ್ಲಭಬಾಯಿ ಪಟೇಲ್ ಈ ವಿಚಾರದಲ್ಲಿ ಸಾಕಷ್ಟು ಚಿಂತನೆ ಮಾಡಬೇಕಾಗಿತ್ತು. ಆ ತನಕ ಮಹಾತ್ಮ ಗಾಂಧೀಜಿ ಹೇಳುತ್ತಿದ್ದ ಅಧಿಕಾರ ವಿಕೇಂದ್ರೀಕರಣದ ಸೂತ್ರಕ್ಕನುಗುಣವಾಗಿ ದೇಶದ ಆಡಳಿತ ವ್ಯವಸ್ಥೆಯನ್ನು ರೂಪಿಸಬೇಕಾಗಿತ್ತು. ಇವರು ಐ.ಎ.ಎಸ್. ಮತ್ತು ಐ.ಪಿ.ಎಸ್. ಮೂಲಕ ಆಡಳಿತವು ಕೇಂದ್ರೀಕರಣವಾಗಲು ಸಹಾಯಕರಾದರು.

ದೇಶದಲ್ಲಿನ ಅಧಿಕಾರಶಾಹಿ ಮನೋಭಾವಕ್ಕೆ ಇತ್ತೀಚೆಗೆ ಪಟ್ನಾ ಉಚ್ಚ ನ್ಯಾಯಾಲಯ ಚಾಟಿ ಬೀಸಿದೆ. ಶಾಲಾ ಶಿಕ್ಷಕರೊಬ್ಬರ ಪಿಂಚಣಿ ಕಳೆದ ಹನ್ನೊಂದು ವರ್ಷದಿಂದ ಇತ್ಯರ್ಥವಾಗಿರಲಿಲ್ಲ. ಈ ಪ್ರಕರಣ ಪಟ್ನಾ ಉಚ್ಚ ನ್ಯಾಯಾಲಯದ ಗಮನಕ್ಕೆ ಬಂದಾಗ ಪ್ರಾಥಮಿಕ ಶಿಕ್ಷಣದ ಪ್ರಧಾನಕಾರ್ಯದರ್ಶಿಯನ್ನು 'ನೀವು ಯಾರಿಗೆ ಉತ್ತರದಾಯಿಯಾಗಿರಬೇಕು. ಬಡ ಶಿಕ್ಷಕ ತನ್ನ ಹಕ್ಕಿನ ಸೌಲಭ್ಯಗಳನ್ನು ಪಡೆಯಬೇಕಾದರೆ ಇಷ್ಟು ಹೋರಾಟ ಮಾಡಬೇಕೆಂದಾದರೆ, ದೇಶದ ಜನರನ್ನು ಯಾರು ರಕ್ಷಿಸುತ್ತಾರೆ, ನ್ಯಾಯಾಲಯವೇ ಇದಕ್ಕೆ ಪರಿಹಾರ ಸೂಚಿಸಬೇಕೇ?' ಎಂದು ಪ್ರಶ್ನೆ ಮಾಡಿತು.

ಈಗ ಎಂ.ಬಿ.ಬಿ.ಎಸ್.ಮತ್ತು ಬಿ.ಇ. ಮಾಡಿದ ಬಹುತೇಕ ಮಂದಿ ಆಡಳಿತಾತ್ಮಕ ಹುದ್ದೆಗಳಿಗೆ ಹೋಗಲು ತುದಿಗಾಲ ಮೇಲೆ ನಿಂತಿದ್ದಾರೆ. ಇತೀಚೆಗೆ ಐ.ಎ.ಎಸ್., ಐ.ಪಿ.ಎಸ್.ಹುದ್ದೆಗಳಿಗೆ ಕೇಂದ್ರ ಲೋಕಸೇವಾ ಆಯೋಗದಿಂದ ಆಯ್ಕೆಯಾದವರಲ್ಲಿ ಶೇಕಡ 60ರಷ್ಟು ಮಂದಿ ಇಂತಹ ತಾಂತ್ರಿಕ ಶಿಕ್ಷಣ ಪಡೆದವರು ಎಂಬ ಅಂಶವನ್ನು ಯು.ಪಿ.ಎಸ್.ಸಿಯೇ ಹೇಳಿದೆ.

ಯುವಜನಾಂಗ ಆಡಳಿತ ಹುದ್ದೆಗಳಿಗೆ ಈ ಪ್ರಮಾಣದಲ್ಲಿ ಹೋಗಲು ಕಾರಣವೇನು ಎಂಬ ಅಂಶ ಚಿಂತನೆಗೆ ಅರ್ಹವಾಗಿದೆ. ಒಬ್ಬ ವೈದ್ಯ ಅದರಲ್ಲೂ ಆತ ಸ್ನಾತಕೋತ್ತರ ಪದವಿ ಪಡೆದಿದ್ದರೆ ಆರೋಗ್ಯ ಕ್ಷೇತ್ರಕ್ಕೆ ಮಹತ್ವದ ಸಂಪನ್ಮೂಲ ವ್ಯಕ್ತಿಯಾಗುತ್ತಾನೆ. ಅದೇ ರೀತಿ ಪ್ರತಿಭಾವಂತ ಇಂಜಿನಿಯರ್ ಅಥವಾ ಕೃಷಿ ಪದವೀಧರ ತನ್ನ ಅಧ್ಯಯನ ಕ್ಷೇತ್ರ ಬಿಟ್ಟು ಬೇರೆ ಕ್ಷೇತ್ರಕ್ಕೆ ಹೋದರೆ, ಆತನ ಅಧ್ಯಯನ ಕ್ಷೇತ್ರಕ್ಕೆ ಎಂತಹ ನಷ್ಟವಾಗಬಹುದು. ತಜ್ಞ ವೈದ್ಯರೊಬ್ಬರನ್ನು ಸಿದ್ಧ ಮಾಡಲು ಸಮಾಜ ಮತ್ತು ಸರ್ಕಾರ ಎಷ್ಟು ವೆಚ್ಚ ಮಾಡಬೇಕಾಗುತ್ತದೆ. ಅವರ ಸೇವೆ ವೈದ್ಯಕೀಯ ಕ್ಷೇತ್ರಕ್ಕೆ ದೊರೆಯದೇ ಆಡಳಿತ ಕ್ಷೇತ್ರಕ್ಕೆ ದೊರೆತರೆ ಏನು ಪ್ರಯೋಜನ, ಇದರಿಂದ ಆಯಾಯ ವ್ಯಕ್ತಿಗೆ ಅಂತಸ್ತು ಮತ್ತು ಅಧಿಕಾರ ದೊರೆಯಬಹುದು. ಅದರಿಂದ ಜ್ಞಾನದ ವಿವಿಧ ಶಾಖೆಗಳಿಗೆ ಪ್ರಯೋಜನವಿಲ್ಲ.

ಉದಾಹರಣೆಗೆ ಹೇಳುವುವಾದರೆ ರಾಜ್ಯ ಸರ್ಕಾರದಲ್ಲಿ 44 ಇಲಾಖೆಗಳಿವೆ. ಇದರ ಮುಖ್ಯಸ್ಥರು ಐ.ಎ.ಎಸ್. ಮತ್ತು ಐ.ಪಿ.ಎಸ್.ನವರೇ ಇರುತ್ತಾರೆ. ಅಲ್ಲಿ ವೈದ್ಯರು, ಇಂಜಿನಿಯರ್, ಕೃಷಿ ವಿಜ್ಞಾನಿ, ಭೂಗರ್ಭಶಾಸ್ತ್ರಜ್ಞ, ತೋಟಗಾರಿಕಾ ತಜ್ಞ, ನೀರಾವರಿ ತಜ್ಞ, ಕಾನೂನು ತಜ್ಞ, ಸಮಾಜಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ಶಿಕ್ಷಣತಜ್ಞರು ಆಡಳಿತದಲ್ಲಿ ಪಾಲುಗೊಂಡಿದ್ದರು. ಉನ್ನತ ಹುದ್ದೆಗಳಿಗೆ ಇವರು ಹೋಗುವಂತಿಲ್ಲ. ಇವರುಗಳು ಸರ್ಕಾರದ ನೀತಿನಿರೂಪಕರಲ್ಲ, ಆ ಅಧಿಕಾರಿಗಳು ಇವರ ಸಲಹೆಯನ್ನು ಕೇಳಿಯೇ ಕೆಲಸ ಮಾಡುತ್ತಾರೆ. ಆದರೆ ಇವರಿಗೆ ಕ್ರೆಡಿಟ್ ಸಿಗುವುದಿಲ್ಲ. ಸಚಿವರುಗಳಿಗೆ ಐಎಎಸ್ ಅಧಿಕಾರಿಗಳೇ ಮುಖ್ಯ ಸಲಹೆಗಾರರಾಗಿರುತ್ತಾರೆ.

ಆಧುನಿಕ ಸಮಾಜದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ವಿವಿಧ ಕ್ಷೇತ್ರಗಳ ತಜ್ಞರು ಸಮಾನವಾಗಿ ಬೆರೆತು ಸಾಮೂಹಿಕವಾಗಿ ಚಿಂತನೆ ಮಾಡಿ ಅದೇ ರೀತಿ ಪ್ರಯತ್ನ ಮಾಡಿದರೆ ಮಾತ್ರ ಯಶಸ್ಸು ದೊರೆಯಲು ಸಾಧ್ಯ. ಭಾರತ ಅಭಿವೃದ್ಧಿಯಾಗಬೇಕಾದರೆ ಕಾರ್ಯಾಂಗದ ದೃಷ್ಟಿಕೋನ ಮತ್ತು ಚಿಂತನೆಯಲ್ಲಿ ಆಮೂಲಾಗ್ರವಾದ ಬದಲಾವಣೆಯಾಗಬೇಕಾಗಿದೆ. ಬ್ರಿಟಿಷ್ ಪ್ರಭುತ್ವದ ಆಡಳಿತ ಮಾದರಿ ಬಿಟ್ಟು ಜನರಿಗೆ ಉತ್ತರದಾಯಿಯಾಗಿರುವ ಆಡಳಿತ ವ್ಯವಸ್ಥೆ ರೂಪುಗೊಳ್ಳಬೇಕಾಗಿದೆ. ಸ್ವಾತಂತ್ರ್ಯೋತ್ಸವದ ಈ ಶುಭ ಸಂದರ್ಭದಲ್ಲಿ ದೇಶದ ಜನತೆ ಈ ವಿಚಾರದ ಬಗ್ಗೆ ಚಿಂತಿಸಬೇಕು ಎಂದು ಪ್ರಾರ್ಥಿಸುತ್ತೇನೆ.



## ಯುವ ಜನಾಂಗಕ್ಕೆ ರಾಷ್ಟ್ರ ಪ್ರೇಮದ ದೀಕ್ಷೆ ನೀಡಿ ಹುರಿದುಂಬಿಸಬೇಕು : ಡಾ.ಎಂ.ಆರ್.ಹುಲಿನಾಯ್ಕರ್

"ಭಾರತವು ತನ್ನದೇ ಆದ ಶಕ್ತಿಯಿಂದ ಜ್ಞಾನ ಮತ್ತು ಬೆಳಕು ಹೊಂದಿರುತ್ತದೆ. "ತ್ಯಾಗ ಬಲಿದಾನವೇ" ಈ ಸ್ವಾತಂತ್ರೋತ್ಸವದ ವೈಶಿಷ್ಟ್ಯ. ಶಿಕ್ಷಣ ಸಂಸ್ಥೆಗಳು ಗುಣಾತ್ಮಕ ಶಿಕ್ಷಣವನ್ನು ನೀಡಬೇಕು. ಶಿಕ್ಷಣದಿಂದಲೇ ದೇಶದ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯ. ಉತ್ತಮ ಶಿಕ್ಷಣವನ್ನು ನೀಡಲು ನಾವೆಲ್ಲರೂ ಸದಾ ಶ್ರಮಿಸಬೇಕು. ಯುವ ಜನಾಂಗಕ್ಕೆ ರಾಷ್ಟ್ರಪ್ರೇಮದ ದೀಕ್ಷೆ ನೀಡಿ ಹುರಿದುಂಬಿಸಬೇಕು, ಸಾವಿರಾರು ವೀರಯೋಧರು ಸ್ವಾತಂತ್ರ್ಯಕ್ಕಾಗಿ ಸಾವುನ್ನಪ್ಪಿದ್ದಾರೆ.

ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರಬೋಸ್, ವಲ್ಲಭಬಾಯಿ ಪಟೇಲ್, ಜವಾಹರಲಾಲ್ ನೆಹರೂ ಮುಂತಾದ ಮಹಾನ್ ವ್ಯಕ್ತಿಗಳನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಕೆಲವೊಮ್ಮೆ ನಾವು ಇತಿಹಾಸವನ್ನು ಪುನರ್ ಪರಿಶೀಲನೆ ಮಾಡಬೇಕಾಗಿದೆ. ಭಾರತದ ಮೊದಲ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾದ ಕಾಲವನ್ನು 1857ರ ಸಿಪಾಯಿ ದಂಗೆ ಎಂದು ಮಕ್ಕಳಿಗೆ ಬೋಧಿಸುತ್ತಿದ್ದೇವೆ. 1824ರಲ್ಲಿ ಕಿತ್ತೂರು ಚನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ ಅವರ ಮಿಲಿಟರಿ ಪ್ರಮುಖನನ್ನು ಹತ್ಯೆ ಮಾಡಿದ್ದಳು. ಆಕೆಯ ನೆಚ್ಚಿನ ಬಂಟ ಸಂಗೊಳ್ಳಿ ರಾಯಣ್ಣ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ. ಆತನನ್ನು 1830ರಲ್ಲಿ ಗಲ್ಲಿಗೇರಿಸಲಾಯಿತು. ಈ ವಿಚಾರಗಳು ಅಖಿಲ ಭಾರತ ಮಟ್ಟದಲ್ಲಿ ಪ್ರಚಾರವಾದರೆ ಕರ್ನಾಟಕವು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕೊಟ್ಟ ಕೊಡುಗೆಯ ಮಹತ್ವ ತಿಳಿಯುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಹತ್ತು ಹಲವಾರು ಸಮಸ್ಯೆಗಳಿದ್ದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬಡತನ, ಅನಕ್ಷರತೆ ಮತ್ತು ಮೂಲಭೂತ ಸೌಕರ್ಯದ ಕೊರತೆ. ಎಲ್ಲವನ್ನೂ ಎದುರಿಸಿ ಇಂದು ಭಾರತ ವಿಶ್ವದ ಐದನೇ ಆರ್ಥಿಕ ರಾಷ್ಟ್ರವಾಗಿ ಹೊರ ಹೊಮ್ಮಿದೆ" ಎಂದು ಶ್ರೀದೇವಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ನಗರದ ಶಿರಾ ರಸ್ತೆಯ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 77ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಆಗಸ್ಟ್ 15ರಂದು ಬೆಳಿಗ್ಗೆ 9ಗಂಟೆಗೆ ಶ್ರೀದೇವಿ ಸಮೂಹ ಸಂಸ್ಥೆಗಳ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ಗಡಿ ಭದ್ರತಾ ಪಡೆಯ ಗಡಿಯೋಧರಾದ ಹೆಚ್.ಜಿ.ಪರಮೇಶ್‌ರವರು ಮಾತನಾಡುತ್ತಾ, ಉತ್ತಮ ಬೃಹತ್ ರಾಷ್ಟ್ರವನ್ನು ನಿರ್ಮಿಸಲು ನಾವೆಲ್ಲರೂ ಸದಾ ಶ್ರಮಿಸಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಇಂತಹ ಅನಕ್ಷರತೆ, ಬಡತನ ನಿರ್ಮೂಲನೆಗೆ ಹೆಚ್ಚು ಒತ್ತುಕೊಟ್ಟು ದೇಶ ಅಭಿವೃದ್ಧಿ ಹೊಂದಲು ಅನೇಕ ಮಹನೀಯರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ ಎಂದರು.


**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

# ವಿದ್ಯಾರ್ಥಿಗಳು ನಿಜ ಜೀವನದಲ್ಲಿ ಹೀರೋಗಳಾಗಿರಬೇಕು

"ವಿದ್ಯಾರ್ಥಿ ಉತ್ತಮ ಫಲಿತಾಂಶ ಪಡೆದರೆ ಇಂದು ಸುಲಭವಾಗಿ ಉದ್ಯೋಗ ದೊರೆಯುತ್ತದೆ. ಗುಣಮಟ್ಟದ ಶಿಕ್ಷಣ ಪಡೆಯುವುದರಿಂದ ಯಶಸ್ಸಿನ ಹಾದಿ ಸುಲಭವಾಗಿ ತಲುಪಬಹುದು. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೆಚ್ಚು ಸಮಯ ನೀಡಬೇಕು. ಜೊತೆಗೆ ವಿದ್ಯಾರ್ಥಿಗಳು ತಮ್ಮ ನಿಜಜೀವನದಲ್ಲಿ ಹೀರೋಗಳಾಗಿರಬೇಕು. ಹೀರೋ ಎಂದರೆ ಯಾರು? ಹಿಂದೆ ಸಿನಿಮಾ ಮತ್ತು ಸಾಹಿತ್ಯದಲ್ಲಿ ಹೀರೋ ಎಂದರೆ ಆದರ್ಶಗಳನ್ನಿಟ್ಟುಕೊಂಡ ವ್ಯಕ್ತಿ ಎಂಬ ಅರ್ಥವಿತ್ತು. ಇಂದಿನ ಸಿನಿಮಾಗಳ ಆದರ್ಶ ಬೇಡ. ಅರವತ್ತರ ದಶಕದಲ್ಲಿ ಮಾಧ್ಯಮಗಳು ಬಿಂಬಿಸಿದ ಆದರ್ಶದ ಹೀರೋ ನಿಮಗೆ ಪ್ರೇರಣೆ ಕೊಡುವ ವ್ಯಕ್ತಿಯಾಗಬೇಕು" ಎಂದು ತುಮಕೂರಿನ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರಾದ ನಹೀದಾ ಜುಮ್ ಜಮ್ ಅವರು ತಿಳಿಸಿದರು.

ಶ್ರೀದೇವಿ ಪದವಿ ಕಾಲೇಜು ಮತ್ತು ಶ್ರೀದೇವಿ ಸ್ನಾತಕೋತ್ತರ ಕೇಂದ್ರದ ವತಿಯಿಂದ ಶ್ರೀಆಗಮನ ಸ್ವಾಗತ ಸಮಾರಂಭ– 2023 ಮತ್ತು 18ನೇ ಕಾಲೇಜಿನ ವಾರ್ಷಿಕೋತ್ಸವ ಶ್ರೀಸೃಷ್ಟಿ ಎಂಬ ಸಮಾರಂಭವನ್ನು ಜುಲೈ 13ರಂದು ಹಮ್ಮಿಕೊಂಡಾಗ ಅದರಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದ್ದರು.




**ತುಮಕೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರಾದ ನಹೀದಾ ಜುಮ್ ಜಮ್, ತುಮಕೂರಿನ ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ನಾಡೋಜ ಡಾ.ವೂಡೆ ಪಿ.ಕೃಷ್ಣ, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಶ್ರೀದೇವಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲರಾದ ಮುಬಾರಕ್ ಹಾಗೂ ಬೋಧಕ ಸಿಬ್ಬಂದಿ.**

ಕಾರ್ಯಕ್ರಮ ಉದ್ಘಾಟಿಸಿದ್ದ ಸಾಮಾಜಿಕ ಕಾರ್ಯಕರ್ತರು, ಶಿಕ್ಷಣತಜ್ಞರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಗೌರವ ಪ್ರಧಾನ ಕಾರ್ಯದರ್ಶಿಯಾದ ಹಾಗೂ ಬೆಂಗಳೂರಿನ ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷರಾದ ನಾಡೋಜ ಡಾ.ವೂಡೆ ಪಿ.ಕೃಷ್ಣ ಅವರು "ವಿದ್ಯಾರ್ಥಿಗಳು ಆತ್ಮವಿಶ್ವಾಸ, ಕೌಶಲ್ಯ, ಶ್ರದ್ಧೆ, ಸಮಯಪ್ರಜ್ಞೆ ಇತ್ಯಾದಿಗಳ ಮೂಲಕ ಯಶಸ್ಸನ್ನು ಸಾಧಿಸಬಹುದು. ಉತ್ತಮ ಫಲಿತಾಂಶ ಪಡೆದವರು ಉದ್ಯೋಗವನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಒಳ್ಳೆಯ ಚಿಂತನೆಯನ್ನು ಬೆಳೆಸಿಕೊಳ್ಳಬೇಕು" ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು "ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಗುರಿಯೆಂದು ಇದ್ದರೆ ಏನು ಬೇಕಾದರೂ ಸಾಧಿಸಬಹುದು. ಉಜ್ವಲ ಭವಿಷ್ಯವನ್ನು ರೂಪಿಸಲು ಉನ್ನತ ಗುರಿ ಅವಶ್ಯಕವಾಗಿರುತ್ತದೆ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಇದಕ್ಕೆ ಅಗತ್ಯವಾದರೆ ಅಧ್ಯಾಪಕರ ಮಾರ್ಗದರ್ಶನ ಪಡೆದುಕೊಳ್ಳಬಹುದು" ಎಂದರು.

ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್ ಅವರು ಮಾತನಾಡುತ್ತಾ "ವಿದ್ಯಾರ್ಥಿಗಳು ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲು ಹೆಚ್ಚು ಶ್ರಮ ವಹಿಸಿ, ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಬೇಕು. ತಾವು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವುದಕ್ಕೆ ನಮ್ಮ ಶಿಕ್ಷಣ ಸಂಸ್ಥೆ ಎಲ್ಲ ಅನುಕೂಲಗಳನ್ನು ಕಲ್ಪಿಸುತ್ತದೆ. ಇವುಗಳ ಸದುಪಯೋಗ ಪಡೆದುಕೊಳ್ಳಬೇಕು" ಎಂದರು.

ಶ್ರೀದೇವಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು "ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಹೆಚ್ಚು ಶ್ರಮ ವಹಿಸಿ ಅಧ್ಯಯನ ಮಾಡಬೇಕು" ಎಂದರು.

ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲರಾದ ಮುಬಾರಕ್ ಅವರು ವಾರ್ಷಿಕ ವರದಿಯನ್ನು ಮಂಡಿಸುತ್ತಾ ವಿದ್ಯಾರ್ಥಿಗಳ ಜವಾಬ್ದಾರಿ, ನೈಪುಣ್ಯತೆ, ಜೀವನದ ಮುಂದಿನ ಸವಾಲುಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಕೆಲವು ಪ್ರಮುಖ ಅಂಶಗಳನ್ನು ತಿಳಿಸಿದರು. ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯರವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ್ದರು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮ ಕೋ–ಆರ್ಡಿನೇಟರ್‌ರಾದ ಪ್ರೊ.ರಾಘವೇಂದ್ರಜಟ್ಟಣ, ಪ್ರೊ.ಸಾರೀಯ ಖಾನಂ, ಪ್ರೊ.ಚಂದ್ರಿಕಾ, ಪ್ರೊ. ಅಷಿಯಾಭಾನು, ಪ್ರೊ.ವತ್ಸಲ, ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ಭಾಗವಹಿಸಿದ್ದರು.




# ಫಾರ್ಮಾಸ್ಯೂಟಿಕಲ್ ಕೋರ್ಸ್‌ಗಳ ಪಠ್ಯಗ್ರಂಥಗಳ ಲೋಕಾರ್ಪಣೆ



ಶ್ರೀಮತಿ ಅರ್ಪಿತಾ ಅವರು, ಫಾರ್ಮಾಸ್ಯೂಟಿಕ್ಸ್ ವಿಭಾಗದಲ್ಲಿ ಎಂ.ಫಾರ್ಮಾ ಪದವೀಧರರಾಗಿದ್ದಾರೆ. ರಾಜಸ್ಥಾನದ ಜೆ.ಜೆ.ಟಿ.ಯೂನಿವರ್ಸಿಟಿಯಲ್ಲಿ ಡಾಕ್ಟರ್ ಆಫ್ ಫಿಲಾಸಫಿಯ ಅಧ್ಯಯನ ಮಾಡುತ್ತಿದ್ದಾರೆ. ಇವರು ತುಮಕೂರಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸಸ್‌ನ ಫಾರ್ಮಾಸ್ಯೂಟಿಕ್ಸ್ ವಿಭಾಗದಲ್ಲಿ ಸಹ ಪ್ರಾಧ್ಯಾಪಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.



ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾವು ಡಿ.ಫಾರ್ಮಾ ವಿಭಾಗದ ಪಠ್ಯಕ್ರಮ ಪರಿಷ್ಕರಣೆಗೊಳಿಸಿದೆ. ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಮತ್ತು ಶ್ರೀದೇವಿ ಇನ್ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯೂಟಿಕಲ್ ಸೈನ್ಸಸ್‌ನ ಸಹಕಾರದೊಂದಿಗೆ ಈ ಪ್ರಾಯೋಗಿಕ ಕೈಪಿಡಿಗಳನ್ನು ಮೊದಲನೇ ಹಾಗೂ ಎರಡನೇ ವರ್ಷದ ಡಿ.ಫಾರ್ಮಾ ಪಠ್ಯಕ್ರಮಕ್ಕೆ ಹೊಂದಿಕೊಳ್ಳುವಂತೆ ಬಹಳ ಅಚ್ಚುಕಟ್ಟಾಗಿ ರಚಿಸಿದ್ದಾರೆ. ಇದನ್ನು ಬೆಂಗಳೂರಿನ ಪ್ರತಿಷ್ಠಿತ ಪ್ರಕಾಶಕರಾದ ನೆಕ್ಸಸ್ ಪಬ್ಲಿಕೇಷನ್ಸ್‌ರವರು ವಿದ್ಯಾರ್ಥಿಗಳಿಗೆ ಕೈಗೆಟುಕುವ ಬೆಲೆಯಲ್ಲಿ ಮಾರುಕಟ್ಟೆಗೆ ಪರಿಚಯಿಸಿದ್ದಾರೆ.

ಈ ಕೈಪಿಡಿಗಳು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾದ ನೂತನ ಪಠ್ಯಕ್ರಮದಲ್ಲಿರುವ ಎಲ್ಲಾ ಪ್ರಯೋಗಗಳನ್ನು ಒಳಗೊಂಡಿದ್ದು ವಿದ್ಯಾರ್ಥಿಗಳಿಗೆ ಅವಶ್ಯವಿರುವ ಎಲ್ಲಾ ಮಾಹಿತಿಗಳ ಸಂಗ್ರಹ ಇದಾಗಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಲೇಖಕರು ವಿದ್ಯಾರ್ಥಿಗಳಲ್ಲಿ ವಿನಂತಿಸಿಕೊಳ್ಳುತ್ತಾರೆ.

ಈ ಕೆಳಕಂಡ ವಿಷಯಗಳಲ್ಲಿ ಪ್ರಾಯೋಗಿಕ ಕೈಪಿಡಿಗಳು ಲಭ್ಯವಿವೆ.

**ಮೊದಲನೇ ಡಿ.ಫಾರ್ಮಾ**

1. ಫಾರ್ಮಾಸ್ಯೂಟಿಕ್ಸ್ (Pharmaceutics)
2. ಫಾರ್ಮಾಸ್ಯೂಟಿಕಲ್ ಕೆಮಿಸ್ಟ್ರಿ (Pharmaceutical chemistry )
3. ಫಾರ್ಮಾಕಾಗ್ನಸಿ (Pharmacognosy)
4. ಹ್ಯೂಮನ್ ಅನಾಟಮಿ ಅಂಡ್ ಫಿಸಿಯಾಲಜಿ (Human Anatomy and Physiology)
5. ಸೋಷಿಯಲ್ ಫಾರ್ಮಸಿ (Social Pharmacy)

**ಎರಡನೇ ಡಿ.ಫಾರ್ಮಾ**

1. ಫಾರ್ಮಾಕಾಲಜಿ (Pharmacology )
2. ಕಮ್ಯೂನಿಟಿ ಫಾರ್ಮಸಿ (Community Pharmacy)
3. ಬಯೋಕೆಮಿಸ್ಟ್ರಿ ಅಂಡ್ ಕ್ಲಿನಿಕಲ್ ಪ್ಯಾಥಾಲಜಿ (Bio Chemistry and Clinical Pathology)
4. ಫಾರ್ಮಕೋಥೆರಾಪ್ಯೂಟಿಕ್ಸ್ (Pharmacotherapeutics)
5. ಹಾಸ್ಪಿಟಲ್ ಅಂಡ್ ಕ್ಲಿನಿಕಲ್ ಫಾರ್ಮಸಿ (Hospital and Clinical Pharmacy)

# ಫಿಸಿಯೋಥೆರಪಿ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ

"ಅರೆ ವೈದ್ಯಕೀಯ ಕೋರ್ಸ್‌ಗಳಲ್ಲಿ ಫಿಸಿಯೋಥೆರಪಿ ಕೋರ್ಸ್‌ಗಳು ಅತ್ಯಂತ ಉಪಯುಕ್ತವಾಗುತ್ತಿವೆ. ಈ ಕೋರ್ಸ್‌ಗಳನ್ನು ಅಧ್ಯಯನ ಮಾಡುವುದರಿಂದ ಉನ್ನತವಾದ ಹುದ್ದೆಗೆ ಆಯ್ಕೆಯಾಗಬಹುದು. ಇಂದು ಫಿಸಿಯೋಥೆರಪಿ ಕ್ಷೇತ್ರದಲ್ಲಿ ಆಧುನಿಕ ತಾಂತ್ರಿಕ ಪರಿಣತಿವುಳ್ಳ ಸಿಬ್ಬಂದಿಯ ಅವಶ್ಯಕತೆ ಹೊಂದಿದೆ. ರೋಗಿಗಳಿಗೆ ಉತ್ತಮ ಸೇವೆ ನೀಡಲು ಇಂತಹ ಅರ್ಹತೆ ತುಂಬಾ ಅವಶ್ಯಕವಾಗಿದ್ದು, ಪಠ್ಯದ ಜೊತೆ ಜೊತೆಯಲ್ಲಿ ಪ್ರಾಯೋಗಿಕ ಕಲಿಕೆಗೆ ಅವಕಾಶವಿರಬೇಕು. ವೈದ್ಯಕೀಯ ಜಗತ್ತಿನಲ್ಲಿ ಫಿಸಿಯೋಥೆರಪಿ ಕೋರ್ಸ್‌ಗಳಿಗೆ ಉತ್ತಮವಾದ ಸ್ಥಾನವಿದೆ" ಎಂದು ಕೊಯಮತ್ತೂರು ಆರ್.ವಿ.ಎಸ್. ಇನ್ಸ್ಟಿಟ್ಯೂಟ್ ಆಫ್ ಹೆಲ್ತ್ ಸೈನ್ಸ್ ಮತ್ತು ಆಯುರ್ವೇದ ಕಾಲೇಜಿನ ಕಾರ್ಯದರ್ಶಿಯಾದ ಡಾ.ಆರ್. ನಾಗರಾಣಿ ಷಣ್ಮುಗಂ ಅವರು, ಜುಲೈ 26ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ಶ್ರೀದೇವಿ ಫಿಸಿಯೋಥೆರಪಿ ಕಾಲೇಜಿನ ವತಿಯಿಂದ ಹಮ್ಮಿಕೊಂಡಿದ್ದ 'ಅವಿನ್ಯಾ- (Avinya) 2023' ಕಾಲೇಜಿನ ವಾರ್ಷಿಕೋತ್ಸವ ಮತ್ತು ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ತಮ್ಮ ಭಾಷಣದಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್‌ರವರು ಮಾತನಾಡುತ್ತಾ "ಹೊಸ ಹೊಸ ಆವಿಷ್ಕಾರಗಳಾದಂತೆ ತಂತ್ರಜ್ಞಾನ ಬೆಳೆದಿದೆ. ಅದನ್ನು ತಮ್ಮ ವೃತ್ತಿಯಲ್ಲಿ ತೊಡಗಿಸಿಕೊಂಡು ಸಮಾಜಕ್ಕೆ ಉತ್ತಮ ಕೌಶಲ್ಯವುಳ್ಳ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು. ವಿದ್ಯಾರ್ಥಿಗಳು ತ್ಯಾಗ, ಸಹನೆ, ವಿಶ್ವಾಸವನ್ನು ವೃತ್ತಿ ಜೀವನದಲ್ಲಿ ಮುಂದುವರೆಸಿಕೊಂಡು ಹೋಗಬೇಕು. ಶ್ರದ್ಧೆಯಿಂದ ರೋಗಿಗಳಿಗೆ ಚಿಕಿತ್ಸೆ ನೀಡಿದರೆ ವಿದ್ಯಾರ್ಥಿಗಳು ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವ ಕಾರ್ಯದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ವೃತ್ತಿಯಲ್ಲಿ ಯಶಸ್ವಿಯಾಗಬೇಕಾದರೆ ವ್ಯಕ್ತಿಯು ಹೇಗೆ ತನ್ನ ಕೆಲಸದಲ್ಲಿ ಮಗ್ನನಾಗುತ್ತಾನೆ ಎಂಬುದರ ಮೇಲೆ ಆತನ ಯಶಸ್ಸು ನಿಂತಿದೆ" ಎಂದರು.



**ಚಿತ್ರದಲ್ಲಿ ಕೊಯಮತ್ತೂರು ಆರ್.ವಿ.ಎಸ್. ಇನ್ಸ್ಟಿಟ್ಯೂಟ್ ಆಫ್ ಹೆಲ್ತ್ ಸೈನ್ಸ್ ಮತ್ತು ಆಯುರ್ವೇದ ಕಾಲೇಜಿನ ಕಾರ್ಯದರ್ಶಿಯಾದ ಡಾ.ಆರ್.ನಾಗರಾಣಿ ಷಣ್ಮುಗಂ, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಪ್ರಾಂಶುಪಾಲರಾದ ಡಾ.ಕೆ.ಎ.ಆನಂದಿ, ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ..ಲಾವಣ್ಯ ರಮಣ ಮತ್ತು ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಪ್ರೊ.ಟಿ.ವಿ.ಬ್ರಹ್ಮದೇವಯ್ಯ ಅವರುಗಳಿದ್ದಾರೆ.**

ಇದೇ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್‌ರವರು ಮಾತನಾಡುತ್ತಾ "ತಂದೆ-ತಾಯಿಗಳ ತ್ಯಾಗ, ಗುರುಗಳ ಕರ್ತವ್ಯನಿಷ್ಠೆ ಹಾಗೂ ನಿಮ್ಮ ಪರಿಶ್ರಮ ನಿಮಗೆ ದಾರಿದೀಪವಾಗುತ್ತದೆ" ಎಂದರು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ "ವಿದ್ಯಾರ್ಥಿಗಳು ಪ್ರೀತಿ ವಿಶ್ವಾಸದಿಂದ ವಿದ್ಯಾಭ್ಯಾಸವನ್ನು ಮಾಡಿದರೆ ಅತ್ಯುತ್ತಮ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ದೇಶ - ವಿದೇಶಗಳಲ್ಲಿಯೂ ಫಿಸಿಯೋಥೆರಪಿ ಕೋರ್ಸ್‌ಗಳಿಗೆ ಬೇಡಿಕೆ ಸಾಕಷ್ಟಿದೆ. ನಿಮಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದಕ್ಕಾಗಿ ನಮ್ಮಲ್ಲಿ ಅತ್ಯುತ್ತಮವಾದ ಬೋಧಕ-ಬೋಧಕೇತರ ಸಿಬ್ಬಂದಿಗಳಿದ್ದಾರೆ. ಈ ಕಾಲೇಜು ಸುಸಜ್ಜಿತ ತಂತ್ರಜ್ಞಾನ, ಅತ್ಯಾಧುನಿಕ ಲ್ಯಾಬ್‌ಗಳನ್ನು ಹೊಂದಿದೆ. ವೃತ್ತಿಯನ್ನು ಪ್ರೀತಿಸಿ, ಅದೇ ರೀತಿ ರೋಗಿಗಳನ್ನು ತುಂಬಾ ಗೌರವದಿಂದ ಕಾಣಿರಿ, ರೋಗಿಗಳನ್ನು ದೇವರಂತೆ ಕಂಡು ಉತ್ತಮ ಚಿಕಿತ್ಸೆ ನೀಡಿ" ಎಂದರು.

ಶ್ರೀದೇವಿ ಫಿಸಿಯೋಥೆರಪಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ.ಎ.ಆನಂದಿರವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ ರಮಣ ಮತ್ತು ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಪ್ರೊ.ಟಿ.ವಿ.ಬ್ರಹ್ಮದೇವಯ್ಯ ಮೊದಲಾದವರು ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

## ಡಾ.ಗಿರೀಶ್.ಎಲ್ ಪಿಹೆಚ್.ಡಿ.ಪದವಿ

ಗಿರೀಶ್.ಎಲ್ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಪ್ರೊ.ರವಿಪ್ರಕಾಶ್.ಎಂ.ಎಲ್. ಅವರ ಮಾರ್ಗದರ್ಶನದಲ್ಲಿ ಮಂಡಿಸಿದ್ದ "ಡೇಟಾ ಅನಲಿಟಿಕ್ಸ್ ಇನ್‌ಲೊಜಿಕಲ್ಲಿ ಕಂಟ್ರೋಲ್ ಪ್ಲೇನ್ ಅಂಡ್ ವಿರ್ಚುಅಲಿಝ್‌ಡ್ ನೆಟ್‌ವರ್ಕ್ ಪಿನ್ಕನ್ ಡಿಪ್ಲೋಯ್ಮೆಂಟ್ಸ್" ಮಹಾಪ್ರಬಂಧಕ್ಕೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.



# ಹಲ್ಲುಗಳ ಆರೈಕೆ ಮೂಲಕ ಆರೋಗ್ಯ ರಕ್ಷಣೆ ನಿಮ್ಮ ಕೈಯಲ್ಲಿ

▶▶ ಮೊದಲನೇ ಪುಟದಿಂದ...

ಬಾಯಿಯ ಬ್ಯಾಕ್ಟೀರಿಯಾ ಮತ್ತು ಗಮ್ ಕಾಯಿಲೆಯ (periodontitis) ತೀವ್ರ ಸ್ವರೂಪಕ್ಕೆ ಸಂಬಂಧಿಸಿದ ಉರಿಯೂತವು ಕೆಲವು ಕಾಯಿಲೆಗಳಿಗೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅಧ್ಯಯನಗಳು ತಿಳಿಸಿವೆ. ಅಲ್ಲದೆ, ಮಧುಮೇಹ ಹಾಗೂ ಎಚ್‌ಐವಿ/ಏಡ್ಸ್‌ನಂತಹ ಕೆಲವು ರೋಗಗಳ ಸೋಂಕಿಗೆ ದೇಹದ ಪ್ರತಿರೋಧಕ ಶಕ್ತಿಯನ್ನು ಕಡಿಮೆ ಮಾಡುವುದಲ್ಲದೆ, ಬಾಯಿಯ ಆರೋಗ್ಯ ಸಮಸ್ಯೆಗಳನ್ನು ಇನ್ನಷ್ಟು ತೀವ್ರಗೊಳಿಸುತ್ತವೆ.

### ಬಾಯಿಯ ಆರೋಗ್ಯ ಯಾವ ಪರಿಸ್ಥಿತಿಗಳಿಗೆ ಸಂಬಂಧಿಸಿರಬಹುದು?

ನಿಮ್ಮ ಬಾಯಿಯ ಆರೋಗ್ಯವು ವಿವಿಧ ರೋಗ ಮತ್ತು ಪರಿಸ್ಥಿತಿಗಳಿಗೆ ಕಾರಣವಾಗಬಹುದು.

**ಅವುಗಳೆಂದರೆ:**

- **ಎಂಡೊಕಾರ್ಡಿಟಿಸ್** (Endocarditis) : ನಮ್ಮ ಹೃದಯದ ಕೋಣೆಗಳು ಅಥವಾ ಕವಾಟಗಳ (ಎಂಡೋಕಾರ್ಡಿಯಂ) ಒಳಗಿನ ಒಳಪದರಕ್ಕೆ ಸೋಂಕು ಬಾಯಿಯಿಂದ ದೇಹದ ಇನ್ನೊಂದು ಭಾಗಕ್ಕೆ ಬ್ಯಾಕ್ಟೀರಿಯಾ ಅಥವಾ ಇತರ ಸೂಕ್ಷ್ಮ ಜೀವಿಗಳು ರಕ್ತಪ್ರವಾಹದ ಮೂಲಕ ಹರಡಿದಾಗ ಹಾಗೂ ಹೃದಯದಲ್ಲಿನ ಕೆಲವು ಪ್ರದೇಶಗಳಿಗೆ ಲಗತ್ತಿಸಿದಾಗ ಸಂಭವಿಸುವ ಕಾಯಿಲೆಯಿದು.
- **ಹೃದ್ರೋಗ** (Cardiovascular disease): ಸಂಪರ್ಕವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗಿಲ್ಲವಾದರೂ, ಕೆಲವು ಸಂಶೋಧನೆಗಳು ಹೃದ್ರೋಗ, ಮುಚ್ಚಿಹೋಗಿರುವ ಅಪಧಮನಿಗಳು ಮತ್ತು ಪಾರ್ಶ್ವವಾಯು ಬಾಯಿಯ ಬ್ಯಾಕ್ಟೀರಿಯಾ ಉಂಟುಮಾಡುವ ಉರಿಯೂತ ಮತ್ತು ಸೋಂಕುಗಳಿಗೆ ಸಂಬಂಧಿಸಿರಬಹುದು ಎಂದು ಸೂಚಿಸುತ್ತದೆ.
- **ಗರ್ಭಧಾರಣೆ ಮತ್ತು ಜನನದ ತೊಡಕುಗಳು** (Pregnancy and birth complications): ಪೆರಿಯೊಡಾಂಟಿಟಿಸ್ ಅಕಾಲಿಕ ಜನನ ಮತ್ತು ಕಡಿಮೆ ತೂಕದ ಜನನಕ್ಕೆ ಸಂಬಂಧಿಸಿದೆ.
- **ನ್ಯುಮೋನಿಯಾ** (Pneumonia): ನಿಮ್ಮ ಬಾಯಿಯಲ್ಲಿರುವ ಕೆಲವು ಬ್ಯಾಕ್ಟೀರಿಯಾಗಳು ಶ್ವಾಸಕೋಶಕ್ಕೆ ಹೋಗಬಹುದು, ಇದು ನ್ಯುಮೋನಿಯಾ ಮತ್ತು ಇತರ ಉಸಿರಾಟದ ಕಾಯಿಲೆಗಳಿಗೆ ಕಾರಣವಾಗಬಹುದು.

### ಕೆಲವು ಪರಿಸ್ಥಿತಿಗಳು ನಿಮ್ಮ ಬಾಯಿಯ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು,

ಅವುಗಳೆಂದರೆ:


- **ಮಧುಮೇಹ** (Diabetes ): ಸೋಂಕಿಗೆ ದೇಹದ ಪ್ರತಿರೋಧವನ್ನು ಕಡಿಮೆ ಮಾಡುವ ಮೂಲಕ, ಮಧುಮೇಹವು ನಿಮ್ಮ ವಸಡುಗಳನ್ನು ಅಪಾಯಕ್ಕೆ ಸಿಲುಕಿಸುತ್ತದೆ. ಮಧುಮೇಹ ಇರುವವರಲ್ಲಿ ವಸಡು ಕಾಯಿಲೆಯು ಹೆಚ್ಚಾಗಿ ಕಂಡುಬರುತ್ತದೆ ಮತ್ತು ತೀವ್ರವಾಗಿರುತ್ತದೆ. ವಸಡಿನ ಕಾಯಿಲೆ ಇರುವವರು ತಮ್ಮ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಕಷ್ಟಪಡುತ್ತಾರೆ ಎಂದು ಸಂಶೋಧನೆ ತಿಳಿಸಿದೆ. ನಿಯಮಿತವಾಗಿ ವಸಡಿನ ಆರೈಕೆ ಮಾಡಿಕೊಳ್ಳುವ ಮೂಲಕ ಮಧುಮೇಹವನ್ನು ನಿಯಂತ್ರಣ ಮಾಡಿಕೊಳ್ಳಬಹುದು.
- **ಎಚ್‌ಐವಿ/ ಏಡ್ಸ್:** ಎಚ್‌ಐವಿ/ಏಡ್ಸ್ (HIV/ AIDS) ಹೊಂದಿರುವ ಜನರಲ್ಲಿ ನೋವಿನ ಮ್ಯೂಕೋಸೆಲ್(Mucocele) ಗಾಯದಂತಹ ಬಾಯಿಯ ಸಮಸ್ಯೆಯು ಸಾಮಾನ್ಯವಾಗಿ ಕಂಡುಬರುತ್ತದೆ.
- **ಆಸ್ಟಿಯೊಪೊರೋಸಿಸ್** (Osteoporosis): ಈ ಮೂಳೆ ದುರ್ಬಲಗೊಳಿಸುವ ರೋಗವು ವಸಡಿನ ಮೂಳೆನಷ್ಟ ಮತ್ತು ಹಲ್ಲಿನ ನಷ್ಟಕ್ಕೆ ಸಂಬಂಧಿಸಿದೆ. ಆಸ್ಟಿಯೊಪೊರೋಸಿಸ್ ಚಿಕಿತ್ಸೆ ನೀಡಲು ಬಳಸುವ ಕೆಲವು ಔಷಧಗಳು ದವಡೆಯ ಮೂಳೆಗಳಿಗೆ ಹಾನಿಯಾಗುವ ಸಣ್ಣ ಅಪಾಯವನ್ನು ಹೊಂದಿರುತ್ತವೆ.
- **ಆಲ್ಝೈಮರ್ಸ್ ಕಾಯಿಲೆ** (Alzheimer's disease): ಆಲ್ಝೈಮರ್ಸ್ ಕಾಯಿಲೆಯು ಹೆಚ್ಚಿದಂತೆ ಬಾಯಿಯ ಆರೋಗ್ಯವೂ ಹದಗೆಡುತ್ತದೆ.

ಬಾಯಿಯ ಆರೋಗ್ಯಕ್ಕೆ ಸಂಬಂಧಿಸಿರುವ ಇತರ ಪರಿಸ್ಥಿತಿಗಳು ತಿನ್ನುವ ಅಸ್ವಸ್ಥತೆಗಳು, ಸಂಧಿವಾತ, ಕೆಲವು ಕ್ಯಾನ್ಸರ್‌ಗಳು ಮತ್ತು ಬಾಯಿ ಒಣಗುವುದು (dry mouth) ( Sjogren's syndrome) ಉಂಟುಮಾಡುವ ಪ್ರತಿರಕ್ಷಣಾ ವ್ಯವಸ್ಥೆಯ ಅಸ್ವಸ್ಥತೆಗಳನ್ನು ಒಳಗೊಂಡಿರುತ್ತದೆ.

ನೀವು ಇತ್ತೀಚೆಗೆ ಅನಾರೋಗ್ಯದಿಂದ ಬಳಲುತ್ತಿದ್ದರೆ ಅಥವಾ ಮಧುಮೇಹದಂತಹ ದೀರ್ಘಕಾಲದ ಸ್ಥಿತಿಯನ್ನು ಹೊಂದಿದ್ದರೆ, ತೆಗೆದುಕೊಳ್ಳುವ ಔಷಧಗಳ ಬಗ್ಗೆ ಮತ್ತು ಆರೋಗ್ಯದಲ್ಲಿನ ಬದಲಾವಣೆಗಳ ಬಗ್ಗೆ ದಂತವೈದ್ಯರಿಗೆ ತಿಳಿಸುವುದೇ ಸೂಕ್ತ.

### ಬಾಯಿಯ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬಹುದು?

- ಬಾಯಿಯ ಆರೋಗ್ಯವು ಹಲ್ಲುಗಳ ಶುಚಿತ್ವದಿಂದ ಪ್ರಾರಂಭವಾಗುತ್ತದೆ. ಹಾಗಾಗಿ ದಿನಕ್ಕೆ ಎರಡು ಸಲ ತಪ್ಪದೆ ಹಲ್ಲುಜ್ಜಿ. ಹಲ್ಲುಗಳನ್ನು ಉಜ್ಜುವಾಗ ಯಾವುದೇ ಅವಸರಬೇಡ. ಸಾಕಷ್ಟು ಸಮಯ ಉಪಯೋಗಿಸಿ ಚೆನ್ನಾಗಿ ಉಜ್ಜಿರಿ.
- ಸರಿಯಾದ ಪೇಸ್ಟು ಮತ್ತು ಬ್ರಷ್ ಉಪಯೋಗಿಸಿ. ಫ್ಲೋರೈಡ್ ಪೇಸ್ಟ್ ಮತ್ತು ಮೃದುವಾದ ಬ್ರಷ್ ಅನ್ನು ಬಳಸಿ.
- ಪ್ರತಿದಿನ ಫ್ಲೋಸ್ ಮಾಡಿ.
- ಯಾವಾಗಲೂ ಮೃದುವಾದ ತಂತಿಗಳುಳ್ಳ ಬ್ರಷ್ ಬಳಸಿ.
- ಊಟವಾದ ಕೂಡಲೇ ಪ್ರತಿಬಾರಿಯೂ ಬಾಯಿ ಮುಕ್ಕಳಿಸಿ.
- ಹಲ್ಲುಜ್ಜುವುದು ಮತ್ತು ಫ್ಲೋಸ್ ಮಾಡಿದ ನಂತರ ಉಳಿದಿರುವ ಆಹಾರದ ಕಣಗಳನ್ನು ತೆಗೆದುಹಾಕಲು ಮೌತ್‌ವಾಶ್ ಬಳಸಿ.



- ಆರೋಗ್ಯಕರ ಆಹಾರವನ್ನು ಸೇವಿಸಿ ಮತ್ತು ಸಕ್ಕರೆಯುಕ್ತ ಆಹಾರ ಮತ್ತು ಪಾನೀಯಗಳನ್ನು ಮಿತವಾಗಿ ಬಳಸಿ.
- ನಿಮ್ಮ ಹಲ್ಲುಜ್ಜುವ ಬ್ರಷ್ ಅನ್ನು ಪ್ರತಿ ಮೂರರಿಂದ ನಾಲ್ಕು ತಿಂಗಳಿಗೊಮ್ಮೆ ಬದಲಾಯಿಸಿ - ಅದರ ತಂತಿ ಕೂದಲು ತಿಕ್ಕಿ ಸವೆದಿರುತ್ತದೆ.
- ನಾಲಿಗೆ ಶುಚಿಯಾಗಿಸಲು ಟಂಗ್ ಕ್ಲೀನರ್ ಬಳಸಿ.
- ನಿಯಮಿತವಾಗಿ ದಂತ ತಪಾಸಣೆ ಮತ್ತು ಶುಚಿಗೊಳಿಸುವಿಕೆಯನ್ನು ನಿಗದಿಪಡಿಸಿ.
- ತಂಬಾಕು ಸೇವನೆಯಿಂದ ದೂರವಿರಿ.

ಅಲ್ಲದೆ, ಬಾಯಿಯ ಆರೋಗ್ಯ ಸಮಸ್ಯೆ ಉದ್ಭವಿಸಿದ ತಕ್ಷಣ ದಂತವೈದ್ಯರನ್ನು ಸಂಪರ್ಕಿಸಿ. ಬಾಯಿಯ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಒಟ್ಟಾರೆ ಆರೋಗ್ಯದ ಮೇಲಿನ ಹೂಡಿಕೆಯಾಗಿದೆ ಎಂಬುದನ್ನು ಮರೆಯದಿರಿ.

■ **ಕನ್ನಡಕ್ಕೆ: ಬಿ.ಎಂ.ಸುನೀತಾ**

# ಜನತೆಯ ಮನದಲ್ಲಿ ಉಳಿದ ರಾಮಕೃಷ್ಣ ಹೆಗಡೆ

**ಆಗಸ್ಟ್ 29ರಂದು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಮತ್ತು ಮಾಜಿ ಕೇಂದ್ರ ಸಚಿವರು, ರಾಜ್ಯದಲ್ಲಿ ಮೊದಲ ಕಾಂಗ್ರೆಸೇತರ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ 97ನೆಯ ಜನ್ಮದಿನಾಚರಣೆ. ಭಾರತದ ರಾಜಕೀಯ ಕ್ಷೇತ್ರಕ್ಕೆ ಹೊಸ ತಿರುವು ಕೊಟ್ಟ ಶ್ರೀ ಹೆಗಡೆ ಅವರನ್ನು, ಅವರ ಕೊಡುಗೆಗಳ ಮೂಲಕ ಜ್ಞಾಪಿಸಿಕೊಳ್ಳುವ ಪ್ರಯತ್ನ ಇಲ್ಲಿ ಮಾಡಲಾಗಿದೆ.**

■ ಡಾ.ಕೆ.ಆರ್.ಕಮಲೇಶ
ಮೊ.94487 93346



### ಆಶ್ರಯತಾಣ

"ಸಾಧಕರು ನೆರಳು ನೀಡುವ ಮರಗಳಿದ್ದಂತೆ. ಅವು ಭೂಮಿ ಸತ್ವವನ್ನು ಪಡೆದು ಬೆಚ್ಚನೆಯ ಬಿಸಿಲು ಮತ್ತು ತಂಪಾದ ಮಳೆಯಿಂದ ಹುಲುಸಾಗಿ ತಮ್ಮದೇ ಚೈತನ್ಯದಿಂದ ಬಲವಾಗಿ ಭದ್ರವಾಗಿ ನಿಂತು ತಮ್ಮ ನೆರಳಿಗೆ ಬಂದವರಿಗೆಲ್ಲಾ ಆಶ್ರಯ ನೀಡುತ್ತವೆ" ಎನ್ನುವ ಸ್ವಾಮಿ ವಿವೇಕಾನಂದರ ಮಾತುಗಳು ರಾಮಕೃಷ್ಣ ಹೆಗಡೆ ಅವರ (ಜನನ 29.8.1929. ಮರಣ 12.01.2004) ಬದುಕಿಗೆ ಸಮರ್ಪಕವಾದ ಹೋಲಿಕೆಯಾಗಿದೆ. ಸುಮಾರು ಅರ್ಧ ಶತಮಾನಕ್ಕೂ ಮೀರಿದಂತೆ ರಾಜಕಾರಣದಲ್ಲಿದ್ದ ಹೆಗಡೆ ಅವರು ರಾಷ್ಟ್ರ ಕಂಡ ಅಪರೂಪದ ಕರ್ನಾಟಕ ರಾಜ್ಯದ ರಾಜಕೀಯ ಕ್ಷೇತ್ರದ ಮುತ್ಸದ್ದಿಗಳಲ್ಲಿ ಒಬ್ಬರಾಗಿದ್ದಾರೆ.

### ತತ್ವ ಸಿದ್ಧಾಂತದ ಮೇಲೆ ರಾಜಕಾರಣ

ಶ್ರೀರಾಮಕೃಷ್ಣ ಹೆಗಡೆ ಅವರಿಗೆ ಪ್ರಿಯವಾದ ಶಬ್ದ 'ಮೌಲ್ಯಾಧಾರಿತ ರಾಜಕಾರಣ'. ಈ ಶಬ್ದದಿಂದಲೇ ರಾಮಕೃಷ್ಣ ಹೆಗಡೆ ಅವರನ್ನು ಅವರ ವಿರೋಧಿಗಳು ಹೆಣೆದಿದ್ದುಂಟು. ರಾಮಕೃಷ್ಣ ಹೆಗಡೆ ಅವರ ಬದುಕನ್ನು ಅಧ್ಯಯನ ಮಾಡಿದಾಗ ಅಲ್ಲಿ ಒಂದಿಷ್ಟು ಮೌಲ್ಯಗಳಿರುವುದನ್ನು ಗಮನಿಸಬಹುದು. ರಾಮಕೃಷ್ಣ ಹೆಗಡೆ ಅವರು ಇಂದಿನಂತೆ ಹೊಂದಾಣಿಕೆ ರಾಜಕಾರಣ ಮಾಡಲಿಲ್ಲ. ಒಮ್ಮೆ ಎಸ್.ನಿಜಲಿಂಗಪ್ಪ ಅವರನ್ನು ನಾಯಕನೆಂದು ಒಪ್ಪಿಕೊಂಡ ನಂತರ ಅಂದಿನ ಪ್ರಧಾನಿ ಎಷ್ಟೇ ಆಮಿಷ ತೋರಿಸಿದರೂ ಅವರು ಸಂಸ್ಥಾ ಕಾಂಗ್ರೆಸ್ ಬಿಟ್ಟು ಅಧಿಕಾರಕ್ಕಾಗಿ ಬೇರೆ ಯಾವ ಪಕ್ಷಕ್ಕೂ ಹೋಗಲಿಲ್ಲ. ರಾಮಕೃಷ್ಣ ಹೆಗಡೆ ಅವರು ವೈಯಕ್ತಿಕವಾಗಿ ತತ್ವಸಿದ್ಧಾಂತದ ಮೇಲೆ ರಾಜಕಾರಣ ಮಾಡಿರುವುದನ್ನು ನೋಡಬಹುದು.

### ಜನತೆ ಬಳಿಗೆ ಸರ್ಕಾರ

ಮುಖ್ಯಮಂತ್ರಿಯಾಗಿ ರಾಮಕೃಷ್ಣ ಹೆಗಡೆ ಅವರು ರೂಪಿಸಿದ 'ಜನತಾ ದರ್ಶನ' ತುಂಬಾ ಜನಪ್ರಿಯ ಕಾರ್ಯಕ್ರಮವಾಗಿತ್ತು. ಇವರಿಗಿಂತ ಹಿಂದಿದ್ದ ಸರ್ಕಾರ ವಿಧಾನಸೌಧಕ್ಕೆ ಸಾರ್ವಜನಿಕರನ್ನು ನಿಷೇಧ ಮಾಡಿತ್ತು. ಅದರಂತೆ ಜಿಲ್ಲೆಯಲ್ಲೂ ಸಾರ್ವಜನಿಕರು ಅಧಿಕಾರಿಗಳನ್ನು ನೋಡುವಂತೆಯೇ ಇರಲಿಲ್ಲ. ಮಧ್ಯಾಹ್ನ 3.30ಕ್ಕೆ ಸಾರ್ವಜನಿಕ ಭೇಟಿ ಎಂಬ ಫಲಕವಿರುತ್ತಿತ್ತು. ಆ ಸಮಯದಲ್ಲಿ ಯಾವ ಅಧಿಕಾರಿಯೂ ಸೀಟ್ ಮೇಲೆ ಕುಳಿತಿರುತ್ತಿರಲಿಲ್ಲ. ರಾಮಕೃಷ್ಣ ಹೆಗಡೆ ಪ್ರಾರಂಭಿಸಿದ ಜನತಾ ದರ್ಶನ ಎಷ್ಟು ಜನಪ್ರಿಯವಾಯಿತು ಎಂದರೆ ನಂತರ ಬಂದ ಎಲ್ಲಾ ಸರ್ಕಾರಗಳು ಅದನ್ನು ಅನುಸರಿಸಿದವು. ಅದಕ್ಕಾಗಿ ಮುಖ್ಯಮಂತ್ರಿಗಳ ಕಚೇರಿಯಲ್ಲಿ 'ಸಾರ್ವಜನಿಕ ಕುಂದುಕೊರತೆಯ ಸೆಲ್' ಪ್ರಾರಂಭವಾಯಿತು. ಈ ಕಾರ್ಯಕ್ರಮವನ್ನು ಭಾರತದ ಅನೇಕ ರಾಜ್ಯಗಳು ತಮ್ಮಲ್ಲಿ ಅಳವಡಿಸಿಕೊಂಡವು.

ರಾಮಕೃಷ್ಣ ಹೆಗಡೆ ಅವರು ದೂರದರ್ಶನ ಮತ್ತು ಆಕಾಶವಾಣಿ ಮೂಲಕ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸತೊಡಗಿದರು. ಇದರಿಂದಲೇ ಹೆಗಡೆ ಅವರು ಮಹಿಳಾಲೋಕದಲ್ಲಿ ಜನಪ್ರಿಯರಾದರು. ಈ ಕಾರ್ಯಕ್ರಮಗಳಿಗೆ ಗ್ರಾಮೀಣ ಭಾಗದ ಮಹಿಳೆಯರು ಯಥೇಚ್ಛ ಸಂಖ್ಯೆಯಲ್ಲಿ ಬರತೊಡಗಿದರು.

1985ರಲ್ಲಿ ರಾಮಕೃಷ್ಣ ಹೆಗಡೆ ಅವರ ಜನತಾಪಕ್ಷ 'ಮನೆಗೊಂದು ಉದ್ಯೋಗ' ಕೊಡುತ್ತೇವೆ ಎಂಬ ಭರವಸೆ ಕೊಟ್ಟಿತ್ತು. ಬೆಳಗಾವಿಯಲ್ಲಿ ನಡೆದ ಜನತಾ ದರ್ಶನದ ಕಾರ್ಯಕ್ರಮದಲ್ಲಿ ಮಹಿಳೆಯೊಬ್ಬರು ಮುಖ್ಯಮಂತ್ರಿಯನ್ನು ತರಾಟೆಗೆ ತೆಗೆದುಕೊಂಡ ದೃಶ್ಯ ದೂರದರ್ಶನದಲ್ಲಿ ಪ್ರಸಾರವಾಯಿತು. ಹೀಗೆ ಸಾರ್ವಜನಿಕರನ್ನು ಎದುರಿಸುವ ಶಕ್ತಿ ಎಷ್ಟು ಜನ ಮುಖ್ಯಮಂತ್ರಿಗಳಲ್ಲಿರುತ್ತದೆ?

### ಜನತೆಯ ಕೈಗೆ ಅಧಿಕಾರ

ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ ಭಾರತಕ್ಕೆ ರಾಮಕೃಷ್ಣ ಹೆಗಡೆ ಅವರ ವಿಶೇಷವಾದ ಕೊಡುಗೆ ಎಂದರೆ ಅಧಿಕಾರ ವಿಕೇಂದ್ರೀಕರಣ. 1964ರಲ್ಲಿ ರಾಮಕೃಷ್ಣ ಹೆಗಡೆ ಅವರು ಎಸ್.ನಿಜಲಿಂಗಪ್ಪ ಸಚಿವ ಸಂಪುಟದಲ್ಲಿ ಪಂಚಾಯತ್‌ರಾಜ್ ಸಚಿವರಾಗಿದ್ದಾಗ 'ಮೈಸೂರು ರಾಜ್ಯ ಪಂಚಾಯಿತ್ ಮಸೂದೆ'ಯನ್ನು ತಂದಿದ್ದರು. ಈ ಮಸೂದೆ ತರಲು ಅಂದಿನ ಪಂಚಾಯತ್ ಕಾನೂನಿನ ತಜ್ಞರಾಗಿದ್ದ ಎಸ್.ಕೆ.ಡೇ. ಅವರ ಮಾರ್ಗದರ್ಶನ ಪಡೆದಿದ್ದರು. ಆದರೆ ಈ ಮಸೂದೆ ಸಮರ್ಪಕವಾಗಿ ಅನುಷ್ಠಾನವಾಗಲಿಲ್ಲ.

ಜಿಲ್ಲಾ ಕೇಂದ್ರ ಮತ್ತು ವಿಭಾಗಮಟ್ಟದಲ್ಲಿ ಕೋಟ್ಯಂತರ ರೂಪಾಯಿಗಳ ಕಾಮಗಾರಿಯನ್ನು ವಿಶೇಷ ಜಿಲ್ಲಾಧಿಕಾರಿ ಮತ್ತು ವಿಭಾಗಾಧಿಕಾರಿಗಳು ನಿರ್ವಹಣೆ ಮಾಡುತ್ತಿದ್ದರು. ತಾಲ್ಲೂಕು ಅಥವಾ ಹೋಬಳಿಯಲ್ಲಿ ಏನಾದರೂ ಕೆಲಸವಾಗಬೇಕಾದರೆ ಶಾಸಕರು, ಜಿಲ್ಲಾಧಿಕಾರಿ ಮತ್ತು ಡಿವಿಜನ್ ಕಮಿಷನರ್‌ಗಳ ಬಳಿ ಅಲೆಯಬೇಕಾಗಿತ್ತು. ಅಧಿಕಾರಿಗಳ ಮೂಲಕ ಕೆಲಸ ಮಾಡಿಸುವುದು ಬ್ರಿಟಿಷರ ಆಳ್ವಿಕೆಯ ತಂತ್ರವಲ್ಲವೇ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಕೈಗೆ ಅಧಿಕಾರ ಕೊಡಬೇಕು. ಗ್ರಾಮ ಅಥವಾ ವಾರ್ಡ್ ಮಟ್ಟದಲ್ಲಿ ಕಾಮಗಾರಿಗಳ ವಿಚಾರದಲ್ಲಿ ಚರ್ಚೆಯಾಗಿ ಅಲ್ಲಿನ ಜನಪ್ರತಿನಿಧಿಗಳು ತಮ್ಮ ಗ್ರಾಮ ಮತ್ತು ವಾರ್ಡ್‌ಗಳಿಗೆ ಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎಂಬುದು ಅಧಿಕಾರ ವಿಕೇಂದ್ರೀಕರಣದ ಮುಖ್ಯ ಗುರಿ.

ರಾಮಕೃಷ್ಣ ಹೆಗಡೆ ಅವರು 1983ರಲ್ಲಿ 'ಕರ್ನಾಟಕ ರಾಜ್ಯ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್' ಅನ್ನು ಜಾರಿಗೆ ತಂದರು. ಅದರಂತೆ ಚುನಾವಣೆ ನಡೆದು ಅಧಿಕಾರ ವಿಕೇಂದ್ರೀಕರಣ ಕೂಡ ನಡೆಯಿತು. ಇವರ ಜೊತೆ ಕೈಜೋಡಿಸಿದ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾದ ಅಬ್ದುಲ್ ನಜೀರ್ ಸಾಬ್ ಸಹ ಇತಿಹಾಸ ಸೇರಿದ್ದಾರೆ.

ಪ್ರಧಾನಿ ರಾಜೀವ್ ಗಾಂಧಿ ಅವರು ರಾಮಕೃಷ್ಣ ಹೆಗಡೆ ಅವರನ್ನು ಟೀಕೆ ಮಾಡುತ್ತಿದ್ದರು, ಆದರೆ ಅವರ ಅನೇಕ ಕಾರ್ಯಕ್ರಮಗಳನ್ನು ಅಖಿಲ ಭಾರತ ಮಟ್ಟದಲ್ಲಿ ಅನುಷ್ಠಾನ ಮಾಡುವುದರ ಮೂಲಕ ಹೆಗಡೆ ಅವರ ಅಭಿಮಾನಿಯಾಗಿದ್ದರು. ಕರ್ನಾಟಕದ ಅಧಿಕಾರ ವಿಕೇಂದ್ರೀಕರಣ ಸೂತ್ರವನ್ನು ಇಡೀ ದೇಶಕ್ಕೆ ಅನ್ವಯವಾಗುವಂತೆ ಸಂವಿಧಾನದ 73–74ನೆಯ ತಿದ್ದುಪಡಿಗೆ ಕಾರಣಕರ್ತರು. ಇಂದು ಮೂರು ಹಂತದ ಪಂಚಾಯತ್ ವ್ಯವಸ್ಥೆ ಇಡೀ ರಾಷ್ಟ್ರದಲ್ಲಿದ್ದರೆ ಅದಕ್ಕೆ ರಾಮಕೃಷ್ಣ ಹೆಗಡೆ ಮತ್ತು ರಾಜೀವ್ ಗಾಂಧಿ ಅವರು ಕಾರಣಕರ್ತರಾಗಿದ್ದಾರೆ.

ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಮತದಾನದ ವಯಸ್ಸನ್ನು 18ಕ್ಕೆ ಇಳಿಸಿದರು. ಇದು ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುತ್ತಿತ್ತು. ಪ್ರಧಾನಿ ರಾಜೀವ್ ಗಾಂಧಿ ಅದನ್ನು ಮೆಚ್ಚಿಕೊಂಡು ರಾಷ್ಟ್ರದ ಯುವ ಜನಾಂಗಕ್ಕೆ 18ನೆಯ ವಯಸ್ಸಿಗೆ ಮತದಾನದ ಹಕ್ಕು ಕೊಡುವುದರ ಮೂಲಕ ಕ್ರಾಂತಿಕಾರಿ ಬದಲಾವಣೆಯನ್ನು ಜಾರಿಗೆ ತಂದರು.

### ಶಿಕ್ಷಣಕ್ಷೇತ್ರಕ್ಕೆ ಹೊಸತನದ ಲೇಪನ

1983ರ ಮೊದಲು ಕರ್ನಾಟಕ ರಾಜ್ಯದ ಶಿಕ್ಷಣ ಕ್ಷೇತ್ರ ಗೊಂದಲದ ಗೂಡಾಗಿತ್ತು. ಖಾಸಗಿ ಶಿಕ್ಷಣಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಲಕ್ಷಾಂತರ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಕ್ಷರಶಃ ಜೀತದಾಳುಗಳಂತೆ ಕೆಲಸ ಮಾಡುತ್ತಿದ್ದರು. ವಿಧಾನಪರಿಷತ್ತಿನ ಸದಸ್ಯರಾದ ಎಸ್.ಚನ್ನಬಸವಯ್ಯ ಮತ್ತು ಶ್ರೀಮತಿ ಪದ್ಮಾವತಿ ವಿಠ್ಠಲರಾವ್ ಅವರುಗಳು ಮಾಡಿದ ಒತ್ತಾಯದ ಹಿನ್ನೆಲೆಯಲ್ಲಿ '1983ರ ಸಮಗ್ರ ಶಿಕ್ಷಣ ಮಸೂದೆ' ಜಾರಿಗೆ ಬಂತು. ಈ ಮಸೂದೆಗೆ ರಾಷ್ಟ್ರಪತಿಗಳ ಅಂಕಿತ ಪಡೆಯಲು ಎಸ್.ಚನ್ನಬಸವಯ್ಯ ಮತ್ತು ಪ್ರೊ.ಹೆಚ್.ಆರ್.ದಾಸೇಗೌಡ ಸಾವಿರಾರು ಶಿಕ್ಷಕ\ಶಿಕ್ಷಕಿಯರನ್ನು ದೆಹಲಿಗೆ ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿದ್ದರು.

ಅದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ '1986ರಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ' ಅನುಷ್ಠಾನ ಮಾಡಿತ್ತು. ಹೀಗೆ ಕರ್ನಾಟಕದ ಅನೇಕ ಕೆಲಸಗಳು ಕೇಂದ್ರ ಸರ್ಕಾರಕ್ಕೆ ಪ್ರೇರಣೆ ಕೊಟ್ಟಿದ್ದವು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಪ್ರಧಾನಿ ರಾಜೀವ್ ಗಾಂಧಿ ಅವರು 1986ರಲ್ಲಿ ಅಂದರೆ ಸುಮಾರು ಎರಡು ದಶಕಗಳ ನಂತರ ದೇಶಕ್ಕೆ ಹೊಸ ಶೈಕ್ಷಣಿಕ ನೀತಿಯನ್ನು ಕೊಟ್ಟಿದ್ದರು. 1964–65ರಲ್ಲಿ ಕೊಠಾರಿ ಶಿಕ್ಷಣ ಆಯೋಗ ಜಾರಿಗೆ ಬಂದ ನಂತರ ಭಾರತದ ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಣೆಗಳೇ ಆಗಿರಲಿಲ್ಲ. ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಪ್ರತಿ ಹತ್ತು ವರ್ಷಕೊಮ್ಮೆ ಶಿಕ್ಷಣ ಕ್ಷೇತ್ರ ಹೊಸ ಚಿಂತನೆಗೆ ತನ್ನನ್ನು ತೆರೆದುಕೊಳ್ಳಬೇಕು. ಅದರಿಂದ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳು ನಾವೀನ್ಯತೆ ಪಡೆಯುತ್ತವೆ. ಇಂದು ಸಹ ದೇಶದಲ್ಲಿ ಅನುಷ್ಠಾನವಾಗಿರುವ ಅನೇಕ ಹೊಸ ವಿಚಾರಗಳಿಗೆ ಮುಖ್ಯಮಂತ್ರಿ ಹೆಗಡೆ ಅವರು ಕಾರಣಕರ್ತರು ಎಂಬುದು ಇಲ್ಲಿ ಮುಖ್ಯವಾದ ವಿಚಾರ.


### ಕೇಂದ್ರ–ರಾಜ್ಯಗಳ ಸಂಬಂಧ

ರಾಮಕೃಷ್ಣ ಹೆಗಡೆ ಅವರು ಕೇಂದ್ರ–ರಾಜ್ಯ ಸರ್ಕಾರದ ಬಾಂಧವ್ಯವನ್ನು ಪುನರ್ ವಿಮರ್ಶಿಸಬೇಕು ಎಂಬ ಒತ್ತಾಯದ ಕಾರಣಕ್ಕಾಗಿ 'ಸರ್ಕಾರಿಯಾ ಆಯೋಗ' ನೇಮಕವಾಯಿತು. ಅಂದು ಹೆಗಡೆ ಅವರು ಎತ್ತಿದ್ದ ಎಲ್ಲಾ ಪ್ರಶ್ನೆಗಳು ಉತ್ತರ ಸಿಗದೆ ಹಾಗೇ ಉಳಿದುಕೊಂಡಿವೆ. ನ್ಯಾಯಮೂರ್ತಿ ರಾಜೇಂದ್ರ ಸಿಂಗ್ ಸರ್ಕಾರಿಯಾ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರದ ನಡುವಿನ ಬಾಂಧವ್ಯ ಸುಧಾರಣೆಗೆ 247 ಶಿಫಾರಸುಗಳನ್ನು ಕೊಟ್ಟಿದ್ದರು. ಅವು ಅನುಷ್ಠಾನವಾಗಿಲ್ಲ.

ರಾಮಕೃಷ್ಣ ಹೆಗಡೆ ಅವರ ಅತಿ ಮುಖ್ಯ ಕೊಡುಗೆ ಭ್ರಷ್ಟಾಚಾರದ ವಿರುದ್ಧ ಹೋರಾಡಲು ರೂಪಿಸಿದ ಕರ್ನಾಟಕ ಲೋಕಾಯುಕ್ತ ಸಂಸ್ಥೆ. ವೈಯಕ್ತಿಕವಾಗಿ ಹೆಗಡೆ ಅವರು ಲೋಕಾಯುಕ್ತ ಸ್ವತಃ ಮುಖ್ಯಮಂತ್ರಿಗಳನ್ನು ತನಿಖೆಗೆ ಒಳಪಡಿಸಬಹುದು ಎಂಬುದು ಮಸೂದೆಯಲ್ಲಿರುವಂತೆ ನೋಡಿಕೊಂಡರು. 1965ರಿಂದ ರಾಜ್ಯದಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕಾಗಿ 'ಮೈಸೂರು ರಾಜ್ಯ ವಿಜಿಲೆನ್ಸ್ ಕಮಿಷನ್' ಎಂಬ ಸಂಸ್ಥೆಯಿತ್ತು. ಅದು ಕೇವಲ ನೌಕರರ ಭ್ರಷ್ಟತೆಯನ್ನು ಆಗಾಗ ಎತ್ತಿ ತೋರಿಸುತ್ತಿತ್ತು. ರಾಮಕೃಷ್ಣ ಹೆಗಡೆ ಅವರು ಲೋಕಾಯುಕ್ತ ಸಂಸ್ಥೆಗೆ 1986ರಲ್ಲಿ ನಿವೃತ್ತ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನಾಗಿ ಐ.ಡಿ.ಕೋಶಾಲ್ ಅವರನ್ನು ಮುಖ್ಯಸ್ಥರನ್ನಾಗಿ ನೇಮಕ ಮಾಡಿದ್ದರು. ಆ ಕಾಲದಲ್ಲಿ ಲೋಕಾಯುಕ್ತ ಸಂಸ್ಥೆಯಿಂದ ಅಂತಹ ಮಹತ್ವದ ಕೆಲಸವಾಗಲಿಲ್ಲ. ಭ್ರಷ್ಟಾಚಾರ ನಿಯಂತ್ರಣದ ವಿಚಾರದಲ್ಲಿ ಹೆಗಡೆ ಅವರು ಲೋಕಾಯುಕ್ತ ಸಂಸ್ಥೆ ಸ್ಥಾಪಿಸಿದ್ದರು ಎನ್ನುವ ಕ್ರೆಡಿಟ್ ಬರಲಿಲ್ಲ. 2001ರಲ್ಲಿ ಎನ್.ವೆಂಕಟಾಚಲ ಅವರು ಕರ್ನಾಟಕದ ಲೋಕಾಯುಕ್ತರಾದರು. 2006ರಲ್ಲಿ ಎನ್.ಸಂತೋಷ ಹೆಗಡೆ ಅವರು ಲೋಕಾಯುಕ್ತರಾದರು. ಆಗ ಕರ್ನಾಟಕದ ಜನತೆಗೆ ರಾಜ್ಯದಲ್ಲಿ ಲೋಕಾಯುಕ್ತ ಎಂಬ ಸಂಸ್ಥೆಯಿದೆ, ಆ ಸಂಸ್ಥೆಯ ಮೂಲಕ ಅಧಿಕಾರಶಾಹಿ ಮತ್ತು ಮುಖ್ಯಮಂತ್ರಿಯೂ ಸೇರಿದಂತೆ ರಾಜಕಾರಣಿಗಳ ಭ್ರಷ್ಟಾಚಾರವನ್ನು ತನಿಖೆ ಮಾಡಿಸಬಹುದು ಎಂಬ ವಿಷಯ ತಿಳಿಯಿತು. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಕಾಲದಲ್ಲಿ ಈ ಸಂಸ್ಥೆ ಅಸ್ತಿತ್ವಕ್ಕೆ ಬಂತು ಎಂಬುದು ಎಷ್ಟು ಜನರಿಗೆ ತಿಳಿದಿದೆ?

### ಸಾಮಾಜಿಕ ಕಾರ್ಯಕ್ರಮ

ಹೆಗಡೆ ಅವರು ಆರ್ಥಿಕವಾಗಿ ದುರ್ಬಲವರ್ಗದ ಗರ್ಭಿಣಿಯರಿಗೆ ಆರು ತಿಂಗಳ ಮಾಸಾಶನ ಮತ್ತು ಹುಟ್ಟುವ ಮಗುವಿಗೆ ಬೇಕಾದ ಎಲ್ಲಾ ಸಲಕರಣೆಗಳನ್ನು ಸರ್ಕಾರದಿಂದ ಕೊಡುವ ಯೋಜನೆಯನ್ನು ರೂಪಿಸಿದರು. ಈ ಯೋಜನೆ 'ವಿಶ್ವ ಆರೋಗ್ಯ ಸಂಸ್ಥೆ'ಯ ಮೆಚ್ಚುಗೆಗೆ ಪಾತ್ರವಾಯಿತು. ದೇಶಕ್ಕೆ ಆರೋಗ್ಯಕರ ಮಕ್ಕಳು ಬೇಕೆಂಬ ಯೋಜನೆ ರೂಪಿಸುವವರು ಸಾಮಾನ್ಯ ರಾಜಕಾರಣಿಗಳೋ ಅಥವಾ ರಾಷ್ಟ್ರನಿರ್ಮಾಪಕರೋ? ವಿಧವಾ ಮಾಸಾಶಾನ ಯೋಜನೆ ಸಹ ಹೆಗಡೆ ಅವರ



ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ ಸಚಿವ ಸಂಪುಟದಲ್ಲಿ ಮೊದಲಬಾರಿ ಯುವಜನ ಖಾತೆ ಸಚಿವರಾಗಿ ರಾಮಕೃಷ್ಣ ಹೆಗಡೆ

ಅಂತಃಕರಣಕ್ಕೆ ಸಾಕ್ಷಿಯಾದ ಕಾರ್ಯಕ್ರಮ. 'ತಾಳಿ ಭಾಗ್ಯ' ಎಂಬ ಯೋಜನೆ ಈ ಕಾಲದಲ್ಲಿ ಜಾರಿಗೆ ಬಂತು. ಆರ್ಥಿಕವಾಗಿ ದುರ್ಬಲ ಕುಟುಂಬಗಳಿಗೆ ಹೆಣ್ಣು ಮಕ್ಕಳ ಮದುವೆ ಎಂದರೆ ಅತ್ಯಂತ ಭಯಾನಕವಾದ ವಿಚಾರವಾಗಿತ್ತು. ತಾಳಿ ಭಾಗ್ಯ ಯೋಜನೆಯಡಿ ಪ್ರಾಪ್ತ ವಯಸ್ಸಿನ ಯುವಕ\ಯುವತಿಯರ ಮದುವೆ ಸಂದರ್ಭದಲ್ಲಿ ವಧುವಿಗೆ ಒಂದು ಗ್ರಾಂ ತೂಕದ ಮಂಗಳ ಸೂತ್ರ, ಧೋತಿ, ಸೀರೆ ಮತ್ತು ಕುಪ್ಪಸವನ್ನು ಸರ್ಕಾರದ ಪರವಾಗಿ ನೀಡುವ ಯೋಜನೆ ಜಾರಿಗೆ ಬಂತು. ಇದರಿಂದಾಗಿ ಕರ್ನಾಟಕದಲ್ಲಿ ಸಾಮೂಹಿಕ ವಿವಾಹಗಳು ಹೆಚ್ಚುಹೆಚ್ಚಾಗಿ ನಡೆಯಲು ಪ್ರಾರಂಭವಾದವು. 1987ರಲ್ಲಿ 'ಮಹಿಳಾ ಅಭಿವೃದ್ಧಿ ನಿಗಮ' ಪ್ರಾರಂಭವಾಯಿತು.

ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುವ ಕಾರ್ಯಕ್ರಮ ಸಹ ಈ ಕಾಲದಲ್ಲಿ ಜಾರಿಗೆ ಬಂತು. ಅಂದಿನ 'ಅಂತ್ಯೋದಯ' ಕಾರ್ಯಕ್ರಮದ ಮುಂದಿನ ಭಾಗವೇ ಇಂದಿನ 'ಅನ್ನಭಾಗ್ಯ' ಯೋಜನೆ.


ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಶಾಲಾಮಕ್ಕಳಿಗೆ ಸರ್ಕಾರಿ ಬಸ್ಸುಗಳಲ್ಲಿ ಉಚಿತ ಪ್ರಯಾಣದ ಯೋಜನೆ ಜಾರಿಗೆ ತಂದರು. ಇದರಿಂದಾಗಿ ತಾಲ್ಲೂಕು, ಹೋಬಳಿ ಮತ್ತು ಗ್ರಾಮಗಳಲ್ಲಿದ್ದ ಯುವಕ\ಯುವತಿಯರು ಕಾಲೇಜು ಶಿಕ್ಷಣ ಪಡೆಯುವಂತಾಯಿತು. ಇಂದು ಯಾವುದೇ ಗ್ರಾಮಕ್ಕೆ ಹೋದರೂ ಆರೇಳು ಪದವೀಧರರು ದೊರೆಯುತ್ತಾರೆ. ಅದರಲ್ಲಿ ಅರ್ಧದಷ್ಟು ಹುಡುಗಿಯರಿರುತ್ತಾರೆ. ಈ ಸಾಮಾಜಿಕ ಬದಲಾವಣೆಯಿಂದಾಗಿ ಕರ್ನಾಟಕ ರಾಜ್ಯದ ಗ್ರಾಮೀಣ ರಾಜಕೀಯ ಮತ್ತು ಸಾಮಾಜಿಕ ವಿಚಾರಗಳಲ್ಲಿ ದೊಡ್ಡ ಜಾಗೃತಿಯುಂಟಾಗಿದೆ. ಎಂಬತ್ತರ ದಶಕದಲ್ಲಿ ಗ್ರಾಮೀಣ ಪ್ರದೇಶದಲ್ಲಿದ್ದ ರಾಜಕೀಯ ಅರಿವಿಗೂ ಇಂದಿನ ರಾಜಕೀಯ ಅರಿವಿಗೂ ಹೋಲಿಕೆ ಮಾಡಿದಾಗ ಕಣ್ಣಿಗೆ ರಾಚುವಂತೆ ಬದಲಾವಣೆ ಕಾಣುತ್ತದೆ. ಕರ್ನಾಟಕದ ಜನತೆಯ ರಾಜಕೀಯ ಮತ್ತು ಸಾಮಾಜಿಕ ಪ್ರಬುದ್ಧತೆ ರಾಷ್ಟ್ರದ ಚಿಂತಕರ ಗಮನ ಸೆಳೆದಿದೆ. ಇದರಲ್ಲಿ ಹೆಗಡೆ ಅವರ ಕೊಡುಗೆಯಿರುವುದನ್ನು ಮರೆಯುವಂತಿಲ್ಲ.

### ರೈತರ ಬಂಧು

ರೈತರ ಸಾಲಮನ್ನಾ ಈ ಕಾಲದ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಹೆಗಡೆ ಅವರು ತೋಟದ ಬೆಳೆಗೆ ಹೆಚ್ಚಿನ ಆದ್ಯತೆ ಕೊಟ್ಟರು. ಇದರಿಂದಾಗಿ ರೈತರಿಗೆ ತುಂಬಾ ಅನುಕೂಲವಾಯಿತು. ಅಧಿಕಾರ ವಿಕೇಂದ್ರೀಕರಣದ ಗರಿಷ್ಠ ಪ್ರಯೋಜನ ಕರ್ನಾಟಕದ ಗ್ರಾಮೀಣ ಭಾಗಗಳಿಗೆ ದೊರೆತಿರುವುದನ್ನು ಕಾಣಬಹುದು. 1964ರಲ್ಲಿ ಹೆಗಡೆ ಅವರು ಫಿಲಿಪೈನ್ಸ್‌ಗೆ ಹೋಗಿದ್ದರು. ಅಲ್ಲಿಂದ ಅವರು ಅನಾನಸ್‌ನ ಗೆಡ್ಡೆ ತಂದು ಶಿರಸಿ ಭಾಗದ ರೈತರಿಗೆ ಕೊಟ್ಟರು. ಅಲ್ಲಿಂದ ಅನಾನಸ್ ರಾಜ್ಯದ ಪ್ರಮುಖ ಬೆಳೆಯಾಯಿತು. ಹೆಗಡೆ ಅವರು ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯ ಹಿಂದೆಂದೂ ಕಾಣದ ಬರಗಾಲದ ಬವಣೆಗೆ ತುತ್ತಾಯಿತು. ಆಗ ಹೆಗಡೆ ಮರ ಬೆಳೆಸುವ ಮತ್ತು ನೀರನ್ನು ಸದುಪಯೋಗಪಡಿಸಿಕೊಳ್ಳುವ ಯೋಜನೆಗಳನ್ನು ರೂಪಿಸಿದರು. ಜಲಾನಯನ ಅಭಿವೃದ್ಧಿಗೆ ಹೆಗಡೆ ಅವರು ಕೊಟ್ಟ ಆದ್ಯತೆ ಬೇರೆ ಯಾರೂ ಕೊಡಲಿಲ್ಲ. ರೈತರ ಬೆಳೆಗೆ ವಿಮೆ ಜಾರಿಗೆ ತಂದರು. ಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ರೈತರಿಗೆ ಸಕಾಲದಲ್ಲಿ ದೊರೆಯುವಂತೆ ಮಾಡಿದರು.

### ಕನ್ನಡದ ಕೆಲಸ

1983ರಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಬರಲು ಕಾರಣವಾದ ಮೂರು ಚಳವಳಿಗಳನ್ನು ಹೆಗಡೆ ಅವರು ಮರೆಯಲಿಲ್ಲ. ಮೊದಲನೆಯ ರೈತ ಚಳವಳಿ. ಎರಡನೆಯದು ಗೋಕಾಕ್ ಚಳವಳಿ ಮತ್ತು ಮೂರನೆಯದು ದಲಿತ ಚಳವಳಿ. ಮೂರೂ ಕ್ಷೇತ್ರಗಳಿಗೆ ಹೆಗಡೆ ಅವರ ಕೊಡುಗೆಯಿದೆ. ಅದೇ ರೀತಿ ಈ ಚಳವಳಿಗಳು ಇತಿಹಾಸಪುಟಕ್ಕೆ ಸೇರುವಂತೆ ತಮ್ಮ ಚಾಣಾಕ್ಷತೆಯನ್ನು ಮೆರೆದವರು ಸಹ ಹೆಗಡೆ ಅವರೇ. ದಲಿತರ ಸತ್ವವಾಗಿದ್ದ, ಕವಿ, ಅತ್ಯಂತ ಮೃದು ಮನಸ್ಸಿನ ವ್ಯಕ್ತಿ ಸಿದ್ದಲಿಂಗಯ್ಯ ಅವರನ್ನು ವಿಧಾನಪರಿಷತ್ತಿನ ಸದಸ್ಯರನ್ನಾಗಿ ನೇಮಿಸಲಾಯಿತು. ಕನ್ನಡ ಚಳವಳಿ ಮತ್ತು ರೈತ




ರಾಮಕೃಷ್ಣ ಹೆಗಡೆ – 75ರ ಸಂದರ್ಭದಲ್ಲಿ ಕಲಾವಿದ ಬಿ.ಕೆ.ಎಸ್.ವರ್ಮಾ ಅವರ ಕುಂಚದ ಮೂಲಕ ಹೆಗಡೆ ಅವರು ಜಾರಿಗೆ ತಂದ ಕಾರ್ಯಕ್ರಮಗಳ ಪರಿಚಯ.

ಚಳವಳಿ ಹಲವು ತುಣುಕುಗಳಾದವು. ಕನ್ನಡ ಚಳವಳಿಗಳು ಹಲವು ಗುಂಪುಗಳಾದವು. ಕನ್ನಡ ಚಳವಳಿಗಾರರಾದ ಜಿ.ನಾರಾಯಣ ಕುಮಾರ್ ಶಾಸಕರಾದರು.

ಇದನ್ನು ಮರೆತು ಸಹ ಕನ್ನಡದ ಅಭಿವೃದ್ಧಿಗೆ ರಾಮಕೃಷ್ಣ ಹೆಗಡೆ ಅವರ ಕೊಡುಗೆಯನ್ನು ಅಲ್ಲಗಳೆಯುವಂತಿಲ್ಲ. 1983ರಲ್ಲಿ ಲೋಕದಳದ ಮೂಲಕ ಆಯ್ಕೆಯಾಗಿ ತಮ್ಮ ಜನತಾ ಪಕ್ಷದ ಸರ್ಕಾರಕ್ಕೆ ಬೆಂಬಲ ನೀಡಿದ್ದ ಶ್ರೀ ಸಿದ್ದರಾಮಯ್ಯ ಅವರನ್ನು 'ಕನ್ನಡ ಕಾವಲು ಸಮಿತಿ'ಯ ಅಧ್ಯಕ್ಷರನ್ನಾಗಿ ರಾಮಕೃಷ್ಣ ಹೆಗಡೆ ಅವರು ನೇಮಿಸಿ ಅದಕ್ಕೆ ಸಚಿವ ಸಂಪುಟದ ಸ್ಥಾನಮಾನ ನೀಡಿದರು. ಪ್ರಾಯಶಃ ಆ ಕಾಲದಲ್ಲಿ ಹತ್ತಾರು ಪಕ್ಷೇತರ ಶಾಸಕರಿದ್ದರು. ಅದರಲ್ಲಿ ಸಿದ್ದರಾಮಯ್ಯ ಅವರಿಗೆ ಮಾತ್ರ ಕನ್ನಡದ ವಿಚಾರದಲ್ಲಿ ಬದ್ಧತೆಯಿರುತ್ತದೆ ಎಂದು ಹೆಗಡೆ ನಂಬಿದ್ದರು. ಅದಕ್ಕೆ ಮುಖ್ಯ ಕಾರಣ ಸಿದ್ದರಾಮಯ್ಯ ಅವರು ರೈತ ಚಳವಳಿಯಿಂದ ತಮ್ಮ ರಾಜಕೀಯ ಬದುಕನ್ನು ಕಟ್ಟಿಕೊಂಡವರು. ರೈತ ಚಳವಳಿಯ ಪ್ರಮುಖ ಧ್ಯೇಯಗಳಲ್ಲಿ ಕನ್ನಡಕ್ಕೆ ಅಗ್ರಸ್ಥಾನ ದೊರೆಯಬೇಕು ಎಂಬ ಒತ್ತಾಯವಿತ್ತು. ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿ ಸಿದ್ದರಾಮಯ್ಯ ಅವರು ಇಡೀ ರಾಜ್ಯವನ್ನು ಸುತ್ತಿದರು. ಗಡಿ ಪ್ರದೇಶಗಳ ಅಭಿವೃದ್ಧಿಗೆ ಉಪಯುಕ್ತ ಸಲಹೆಗಳನ್ನು ಕೊಟ್ಟರು.

1983ರ ತನಕ ವಿಧಾನಸೌಧದಲ್ಲಿ ಶೇಕಡ 10ರಷ್ಟು ಮಾತ್ರ ಕನ್ನಡ ಆಡಳಿತ ಭಾಷೆಯಾಗಿತ್ತು. ವಿಭಾಗ ಮತ್ತು ಜಿಲ್ಲಾ ಮಟ್ಟದಲ್ಲಿ ಶೇಕಡ 20ರಷ್ಟು ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆಯಿತ್ತು.



ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ

ಹೆಗಡೆ ಅವರು ಸಿದ್ದರಾಮಯ್ಯ ಅವರು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿ ನೀಡಿದ ವರದಿಯನ್ನು ಅನುಷ್ಠಾನ ಮಾಡಿದ ಕಾರಣ ಇಂದು ವಿಧಾನಸೌಧದಲ್ಲಿ ಶೇಕಡ 80 ಮತ್ತು ವಿಭಾಗ ಮತ್ತು ಜಿಲ್ಲೆಗಳಲ್ಲಿ ಶೇಕಡ 95ರಷ್ಟು ಆಡಳಿತದಲ್ಲಿ ಕನ್ನಡ ಬಳಕೆಯಾಗುತ್ತಿದೆ. ಭಾಷೆಯ ದೃಷ್ಟಿಯಿಂದ ಇದೊಂದು ಮಹತ್ವದ ಪರಿವರ್ತನೆ. ಈ ಪರಿವರ್ತನೆಗೆ ಮುಂದೆ ಆಡಳಿತ ನಡೆಸಿದವರು ಕೊಡುಗೆಗಳನ್ನು ಕೊಟ್ಟಿದ್ದಾರೆ. ಪರಿವರ್ತನೆಗೆ ನಾಂದಿ ಹಾಡಿದ ಶ್ರೇಯಸ್ಸು ಹೆಗಡೆ ಅವರಿಗೆ ಸಲ್ಲುತ್ತದೆ.

ಹಂಪಿಯ 'ಕನ್ನಡ ವಿಶ್ವವಿದ್ಯಾಲಯ' ಮತ್ತು ಬೆಳಗಾವಿಯಲ್ಲಿ 'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ' ಸ್ಥಾಪನೆಯ ನಿರ್ಧಾರವನ್ನು ಹೆಗಡೆ ಅವರು ಮಾಡಿದ್ದರು. ಶಿವಮೊಗ್ಗದಲ್ಲಿ 'ಕುವೆಂಪು ವಿಶ್ವವಿದ್ಯಾಲಯ' ಈ ಕಾಲದಲ್ಲಿ ಪ್ರಾರಂಭವಾಯಿತು. ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಬೀದರ್‌ನಲ್ಲಿ ಪಶುವೈದ್ಯಕೀಯ ಕಾಲೇಜು ಮತ್ತು ರಾಯಚೂರಿನಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಪ್ರಾರಂಭವಾದವು.

### ಬೆಂಗಳೂರಿಗೆ ಹೊಸ ಸ್ವರೂಪ

ರಾಜ್ಯದಲ್ಲಿ ಯುವಜನ ಸೇವಾ ಇಲಾಖೆ ಪ್ರಾರಂಭಕ್ಕೆ ಕಾರಣಕರ್ತರು ಹೆಗಡೆ ಅವರು. ನೃಪತುಂಗ ರಸ್ತೆಯಲ್ಲಿರುವ 'ಯವನಿಕಾ' ಮತ್ತು ಮಿಲ್ಲರ್ ರಸ್ತೆಯಲ್ಲಿರುವ 'ಗುರುನಾನಕ್' ಸಭಾಂಗಣ ಹೆಗಡೆ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಉದ್ಘಾಟನೆಯಾದವು. ಬೆಂಗಳೂರು ಮಾಹಿತಿ ತಂತ್ರಜ್ಞಾನದ ಕೇಂದ್ರವಾಗಲು ಹೆಗಡೆ ಅವರ ಕೊಡುಗೆಯಿರುವುದನ್ನು ಮರೆಯುವಂತಿಲ್ಲ. ಬೆಂಗಳೂರು ಹಸಿರುಮಯವಾಗಲು ಹೆಗಡೆ ಅವರು ಕಾರ್ಯಕ್ರಮ ರೂಪಿಸಿದ್ದರು. ರಾಮಕೃಷ್ಣ ಹೆಗಡೆ ಅವರು ಬರುವ ಮೊದಲು ಬೆಂಗಳೂರಿಗೆ ಅಂತಹ ಉತ್ತಮ ಹೆಸರಿರಲಿಲ್ಲ. ರೌಡಿಗಳ ತಾಣ ಎಂದು ಅನೇಕ ಮಾಧ್ಯಮಗಳು ಬರೆದಿದ್ದವು. ಮುಖ್ಯಮಂತ್ರಿಯಾದ ತಕ್ಷಣ ಬೆಂಗಳೂರಿಗೆ ಈ ಹಣೆಪಟ್ಟಿ ತೆಗೆಯಲು ಸಂಕಲ್ಪ ಮಾಡಿದರು. ಇದನ್ನು ಬೆಂಗಳೂರಿನ ಪೊಲೀಸ್ ಕಮಿಷನರ್ ಆಗಿದ್ದ ಪಿ.ಜಿ.ಹರ್ಲಂಕರ್ ಅವರ ಮಾತುಗಳಲ್ಲಿ ಕೇಳಬಹುದು. "ನಾನು ಬೆಂಗಳೂರಿನ ಪೊಲೀಸ್ ಕಮಿಷನರ್ ಆಗಿ ನೇಮಕವಾದ ಮೊದಲ ದಿನವೇ ಮುಖ್ಯಮಂತ್ರಿ ಹೆಗಡೆ ಅವರು ಚಾರ್ಜ್ ತೆಗೆದುಕೊಂಡು ಬಂದು ನನ್ನನ್ನು ನೋಡುವಂತೆ ಹೇಳಿದರು. ಹೋದರೆ, ನಗರದ ಎಲ್ಲಾ ಬಡಾವಣೆಗಳಲ್ಲೂ ಪೊಲೀಸ್ ಇರಬೇಕು ಎಲ್ಲೂ ಗೂಂಡಾಗಳಿರಬಾರದು. ನಗರಕ್ಕೆ ಅಂಟಿದ ಕಳಂಕವನ್ನು ತೊಡೆದು ಹಾಕಬೇಕು. ನಮ್ಮ ಕಚೇರಿಯಿಂದ ನಿಮ್ಮ ಕೆಲಸಕ್ಕೆ ಯಾವುದೇ ಅಡ್ಡಿ ಬರುವುದಿಲ್ಲ ಎಂಬ ಅಶ್ವಾಸನೆ ಕೊಟ್ಟರು",

### ಸಂಸ್ಕೃತಿ ಪ್ರೇಮಿ

ಬೆಂಗಳೂರು ಸಾಹಿತ್ಯ, ಸಂಸ್ಕೃತಿ, ಚಿತ್ರಕಲೆ, ನಾಟ್ಯ, ನಾಟಕ, ಚಲನಚಿತ್ರ ಮೊದಲಾದ ಅನೇಕ ವಿಚಾರಗಳಲ್ಲಿ ರಾಷ್ಟ್ರಮಟ್ಟದಲ್ಲಿ ಉಲ್ಲೇಖಿಸುವಂತಾಗಲು ಹೆಗಡೆ ಅವರ ಕೊಡುಗೆಯಿದೆ. ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಹೆಗಡೆ ಅವರಿಗಿದೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಬೆಳವಣಿಗೆಯಲ್ಲೂ ಹೆಗಡೆ ಅವರ ಪಾತ್ರವನ್ನು ಗುರುತಿಸಬಹುದು.

### ಯಾವ ಸ್ಥಾನದಲ್ಲಿದ್ದರೂ ರಾಜ್ಯವನ್ನು ಮರೆಯದವರು

ರಾಮಕೃಷ್ಣ ಹೆಗಡೆ ಅವರು ಯಾವ ಸ್ಥಾನದಲ್ಲಿದ್ದರೂ ಕರ್ನಾಟಕದ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕೇಂದ್ರದಲ್ಲಿ ವಿ.ಪಿ.ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ಹೆಗಡೆ ಅವರು 'ಯೋಜನಾ ಆಯೋಗದ' ಉಪಾಧ್ಯಕ್ಷರಾಗಿದ್ದರು. ಆಗ ಕೊಂಕಣ ರೈಲ್ವೆ ಯೋಜನೆಗೆ ಮಂಜೂರಾತಿ ದೊರೆಯಿತು. ಕೊಂಕಣ ರೈಲ್ವೆ ಯೋಜನೆಯ ಅನುಷ್ಠಾನದಲ್ಲಿ ಮೂವರ ಪಾತ್ರವಿದೆ. ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ರಾಮಕೃಷ್ಣ ಹೆಗಡೆ, ರೈಲ್ವೆ ಸಚಿವರಾಗಿದ್ದ ಜಾರ್ಜ್ ಫರ್ನಾಂಡೀಸ್ ಮತ್ತು ಹಣಕಾಸು ಸಚಿವರಾಗಿದ್ದ ಮಧು ದಂಡವತೆ.

ಯೋಜನಾ ಆಯೋಗದ ಉಪಾಧ್ಯಕ್ಷರಾಗಿ 'ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ'ಗೆ ಅನುದಾನ ನೀಡಿದ ಹೆಗ್ಗಳಿಕೆ ರಾಮಕೃಷ್ಣ ಹೆಗಡೆ ಅವರದು.

### ರಾಜಕಾರಣಕ್ಕೆ ಹೊಸ ನೀರು ತಂದವರು

ಮುಖ್ಯಮಂತ್ರಿಯಾಗಿ ರಾಮಕೃಷ್ಣ ಹೆಗಡೆ ಅವರು ಕರ್ನಾಟಕದ ರಾಜಕಾರಣಕ್ಕೆ ಹೊಸ ನೀರು ಬರಲು ಕಾರಣಕರ್ತರಾಗಿದ್ದಾರೆ. ಅನೇಕ ಯುವ ನಾಯಕರಿಗೆ ಪ್ರೋತ್ಸಾಹ, ಬೆಂಬಲ ಕೊಟ್ಟ ಕೀರ್ತಿ ಅವರದು. ಜೊತೆಗೆ ಹಿರಿಯರನ್ನು ಸಮರ್ಥವಾಗಿ ಗುರುತಿಸಿದ್ದರು. ಪ್ರಾಯಶಃ ನಜೀರ್ ಸಾಬ್ ಇಂದು ಕರ್ನಾಟಕದ ಜನಮನದಲ್ಲಿ 'ನೀರು ಸಾಬ್' ಆಗಿ ಉಳಿದಿದ್ದರೆ, ಅದಕ್ಕೆ ಹೆಗಡೆ ಅವರ ಕೊಡುಗೆಯಿದೆ. ಅದೇ ಬಿ.ರಾಚಯ್ಯ, ಎಂ.ಚಂದ್ರಶೇಖರ್, ವಿ.ಎಸ್. ಕೃಷ್ಣಅಯ್ಯರ್, ಎಸ್.ಆರ್.ಬೊಮ್ಮಾಯಿ. ಹೆಚ್.ಡಿ.ದೇವೇಗೌಡ, ಜೆ.ಹೆಚ್.ಪಟೇಲ್, ಬಿ.ಎಲ್. ಗೌಡ, ಡಿ.ಬಿ.ಚಂದ್ರೇಗೌಡ, ವಿ.ಎಲ್.ಪಾಟೀಲ್. ಡಿ.ಮಂಜುನಾಥ್, ಅಜೀಜ್ ಸೇಟ್ ಮುಂತಾದವರನ್ನು ಅವರ ಶಕ್ತಿಗೆ ಅನುಸಾರ ಹೆಗಡೆ ಬಳಸಿಕೊಂಡಿದ್ದಾರೆ.

ಇನ್ನು ಈ ಕಾಲದಲ್ಲಿ ಬೆಳೆದ ಹೊಸ ನಾಯಕತ್ವದ ಪಟ್ಟಿ ತುಂಬಾ ದೊಡ್ಡದಿದೆ. ಪಿ.ಜಿ.ಆರ್.ಸಿಂಧ್ಯ, ಸಿದ್ದರಾಮಯ್ಯ, ಬಿ.ಸೋಮಶೇಖರ್, ಡಾ.ಜೀವರಾಜ ಆಳ್ವ, ಜಾಲಪ್ಪ, ಆರ್.ವಿ.ದೇಶಪಾಂಡೆ, ಕೆ.ರಘುಪತಿ, ಹೆಚ್.ಜಿ.ಗೋವಿಂದಗೌಡ, ರಮೇಶ ಜಿಗಜಿಣಗಿ, ಲಕ್ಷ್ಮೀನರಸಿಂಹಯ್ಯ, ವೈ.ಕೆ.ರಾಮಯ್ಯ, ಜೀವಿಜಯ, ಬಿ.ಎಲ್.ಶಂಕರ್, ಬಿ.ಟಿ.ಲಲಿತಾ ನಾಯ್ಕ್, ವೀರಣ್ಣ, ಡಿ.ಬಿ.ಇನಾಂದಾರ್. ಎ.ಬಿ.ಪಾಟೀಲ್, ವಿಶ್ವನಾಥರೆಡ್ಡಿ ಮುದ್ನಾಳ್, ಬಿ.ಆರ್.ಪಾಟೀಲ್ ಬಸವರಾಜ ರಾಯರಡ್ಡಿ, ಕೆ.ಬಿ.ಶಾಣಪ್ಪ, ಅಮರನಾಥ ಆಳ್ವ, ರೋಷನ್ ಬೇಗ್ ಈ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತ್‌ಗಳ ಮೂಲಕ ಉದಯವಾದ ಹೊಸ ರಾಜಕೀಯ ನಾಯಕತ್ವ ಕರ್ನಾಟಕ ರಾಜಕಾರಣದಲ್ಲಿ ಬೀರಿರುವ ಪ್ರಭಾವ ವ್ಯಾಪಕವಾದ ಅಧ್ಯಯನವನ್ನು ಬಯಸುತ್ತದೆ.

### ಮಾಡಬೇಕಾದ ಮಹತ್ವದ ಕೆಲಸ

ರಾಮಕೃಷ್ಣ ಹೆಗಡೆ ಅಂತಹ ರಾಷ್ಟ್ರನಿರ್ಮಾಪಕರು ಮತ್ತು ಮುತ್ಸದ್ದಿಯನ್ನು ಅವರು ಹುಟ್ಟಿದ ಆಗಸ್ಟ್ ಮತ್ತು ನಿಧನರಾದ ಜನವರಿ ತಿಂಗಳಿಗೆ ಮೀಸಲುಗೊಳಿಸಿ ನೆನಪು ಮಾಡಿಕೊಳ್ಳುವುದು ಅವರ ವ್ಯಕ್ತಿತ್ವಕ್ಕೆ ದ್ರೋಹ ಬಗೆದಂತೆ. ಅಬ್ರಹಾಂ ಲಿಂಕನ್ ಮತ್ತು ಚರ್ಚಿಲ್‌ರಂತಹ ವ್ಯಕ್ತಿಗಳ ಹೆಸರಿನಲ್ಲಿ ರಾಜ್ಯಶಾಸ್ತ್ರ ಮತ್ತು ಮಾನವಿಕ ಅಧ್ಯಯನ ಕೇಂದ್ರ ಪ್ರಾರಂಭವಾಗಿ ಅವು ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿವೆ. ಇಂತಹ ಸಂಸ್ಥೆಗಳು ಕೇವಲ ಆಯಾಯ ವ್ಯಕ್ತಿಯ ಅಧ್ಯಯನಕ್ಕೆ ಸೀಮಿತಗೊಳ್ಳಬಾರದು. ಉಪನ್ಯಾಸಗಳ ಜೊತೆ ಯುವ ಜನಾಂಗಕ್ಕೆ ನಾಯತ್ವದ ವಿಚಾರದಲ್ಲಿ ತರಬೇತಿ ಕೊಡಬೇಕು. ಅನೇಕ ಸಾಮಾಜಿಕ ಸಮಸ್ಯೆಗಳ ವಿಚಾರದಲ್ಲಿ ಕ್ಷೇತ್ರಕಾರ್ಯ ಮಾಡಿ ಸರ್ಕಾರಕ್ಕೆ ವರದಿ ಕೊಡಬೇಕು. ಎಚ್ಚೆತ್ತ ಜನತೆಯ ಧ್ವನಿಯಾಗಿ ಈ ಸಂಸ್ಥೆಗಳು ಕೆಲಸ ಮಾಡಬೇಕು. ಇದನ್ನು ಸರ್ಕಾರವೇ ಮಾಡಬೇಕು ಎನ್ನುವ ಹಠವಿಲ್ಲ. ರಾಮಕೃಷ್ಣ ಹೆಗಡೆ ಅವರನ್ನು ಪ್ರೀತಿಸುವ ಮತ್ತು ಅವರ ವಿಚಾರಧಾರೆಗಳನ್ನು ಮೆಚ್ಚುವ ಜನರು ಈ ಕೆಲಸವನ್ನು ಕೈಗೆತ್ತಿಕೊಳ್ಳಬೇಕು. ಸರ್ಕಾರವೂ ಇದಕ್ಕೆ ಪ್ರೋತ್ಸಾಹ ಕೊಡಬೇಕು. ಅದರಿಂದ ಕರ್ನಾಟಕ ರಾಜ್ಯದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಿಗೆ ಪ್ರಯೋಜನ ದೊಡ್ಡ ಪ್ರಮಾಣದಲ್ಲಿ ದೊರೆಯುತ್ತದೆ.

ಅರ್ಚನೆ



ಸಿ.ವಿ.ತಿರುಮಲರಾವ್
ಮೊ.84949 05692

# ಪಂಚಮ ಮಂತ್ರಾಲಯಕ್ಕೊಮ್ಮೆ ಬನ್ನಿ

**ಶ್ರೀರಾಯರು ವೃಂದಾವನಸ್ಥರಾದ ಹನ್ನೆರಡು ವರ್ಷಗಳಿಗೆ ಸರಿಯಾಗಿ ಚನ್ನಗಿರಿಯಲ್ಲಿ ಮೃತ್ತಿಕಾ ವೃಂದಾವನವಾಗಿರುವುದು ಅರ್ಥಪೂರ್ಣವಾಗಿದೆ. ಮಾಧ್ವ ಪರಂಪರೆಯಲ್ಲೂ 12 ಸಂಖ್ಯೆಗೆ ವಿಶೇಷವಾದ ಮಹತ್ವವಿದೆ. ಅಲ್ಲಿಂದ ನಿರಂತರವಾಗಿ ಶ್ರೀರಾಘವೇಂದ್ರಗುರುಗಳ ಪೂಜಾಕಾರ್ಯ ಮತ್ತು ಆರಾಧನೆ ನಿರ್ವಿಘ್ನವಾಗಿ ನಡೆದುಕೊಂಡು ಬರುತ್ತಿರುವುದು ಈ ಸ್ಥಳ ಐದನೆಯ ಮಂತ್ರಾಲಯ ಎಂಬ ವಿಶೇಷತೆಯನ್ನು ದೃಷ್ಟಾಂತದ ಮೂಲಕ ಸಾಬೀತು ಪಡಿಸಿದಂತೆ ಆಗಿದೆ.**

ಭಾರತ ದೇಶ ಪುಣ್ಯಭೂಮಿ ಎಂದೇ ಖ್ಯಾತವಾಗಿದೆ. ದೇವಾನುದೇವತೆಗಳು ನಡೆದಾಡಿದ ಸ್ಥಳ ಎನ್ನುವ ಭಾವನೆ ಇತಿಹಾಸಪೂರ್ವ ಕಾಲದಿಂದಲೂ ನಮ್ಮಲ್ಲಿ ಬೇರೂರಿದೆ. ಭಾರತದ ಎಲ್ಲಾ ರಾಜ್ಯಗಳಲ್ಲೂ ಶ್ರೀರಾಮ, ಶ್ರೀಕೃಷ್ಣ, ಶ್ರೀಈಶ್ವರ, ಶ್ರೀಗಣಪತಿ, ಶ್ರೀಲಕ್ಷ್ಮೀ, ಶ್ರೀದೇವಿ ಮೊದಲಾದ ದೇವತೆಗಳಿಗೆ ಸಂಬಂಧಪಟ್ಟ ಐತಿಹ್ಯಗಳಿರುವುದನ್ನು ಗಮನಿಸಬಹುದು.

ದೇವರನ್ನು ಒಲಿಸಿಕೊಂಡ ಆತನ ಅಂತರಂಗದ ಭಕ್ತರು, ದೇವರಷ್ಟೇ ಪೂಜನೀಯರಾಗಿರುತ್ತಾರೆ. ಶ್ರೀ ಶಂಕರಾಚಾರ್ಯ, ಶ್ರೀ ರಾಮಾನುಜಾಚಾರ್ಯ, ವಿಶ್ವಗುರು ಬಸವಣ್ಣ, ಶ್ರೀ ಮಧ್ವಾಚಾರ್ಯ, ಶ್ರೀಗುರುನಾನಕ್ ಮೊದಲಾದ ಮಹಾನ್ ವ್ಯಕ್ತಿಗಳ ಪ್ರಭಾವ ನೂರಾರು ವರ್ಷಗಳಿಂದ ನಿರಂತರವಾಗಿ ಜನಮಾನಸದ ಮೇಲೆ ಆಗುತ್ತಿದೆ. ಅವರಲ್ಲಿ ಮಾಧ್ವಸಿದ್ಧಾಂತದ ಪರಂಪರೆಯಲ್ಲಿ ಬಂದಿರುವ ಶ್ರೀ ರಾಘವೇಂದ್ರತೀರ್ಥರು ಸಾಮಾನ್ಯವಾಗಿ ಎಲ್ಲರಿಗೂ ಚಿರಪರಿಚಿತವಾದ ಆಧ್ಯಾತ್ಮಿಕ ಚೇತನವಾಗಿದ್ದಾರೆ.

ಶ್ರೀ ರಾಘವೇಂದ್ರ ಗುರುಗಳ ಚರಿತ್ರೆಯನ್ನು ಅವಲೋಕಿಸುವಾಗ ಚರಿತ್ರೆಗಿಂತ ಪವಾಡಕ್ಕೆ ಹೆಚ್ಚಿನ ಮನ್ನಣೆ ದೊರೆಯುತ್ತದೆ. ವಾಸ್ತವವಾಗಿ ಶ್ರೀರಾಘವೇಂದ್ರಗುರುಗಳು ಭಾರತೀಯ ತತ್ವಶಾಸ್ತ್ರ ಪರಂಪರೆಗೆ ಅಮೋಘವಾದ ಕಾಣಿಕೆ ನೀಡಿದ್ದಾರೆ. ಶ್ರೀ ವ್ಯಾಸರಾಯರಂತೆ ಸಮಕಾಲೀನ ಜಗತ್ತಿನಲ್ಲಿ ಪರಕೀಯ ದಾಳಿಯಿಂದ ಕಂಗೆಟ್ಟಿದ್ದ ಜನರನ್ನು ಕಾಪಾಡಿ ಅವರಲ್ಲಿ ನೈತಿಕಸ್ಥೈರ್ಯ ತುಂಬಿದ್ದಾರೆ.

ಶ್ರೀ ರಾಘವೇಂದ್ರಸ್ವಾಮಿಗಳವರು ಬಹು ದೊಡ್ಡ ಸಂಸ್ಕೃತ ವಿದ್ವಾಂಸರು. ಅದರಲ್ಲೂ ವ್ಯಾಕರಣಶಾಸ್ತ್ರ ಅಧ್ಯಯನದ ವಿಚಾರದಲ್ಲಿ ಅವರಿಗೆ ಅಸಾಧಾರಣ ಪಾಂಡಿತ್ಯವಿತ್ತು. ಸುಮಾರು ನಲವತ್ತು ಗ್ರಂಥಗಳನ್ನು ಅವರು ರಚಿಸಿದ್ದಾರೆ. ದ್ವೈತ ಮತದ ಸ್ಥಾಪಕರಾದ ಶ್ರೀ ಮಧ್ವಾಚಾರ್ಯರು, ಆ ಮತದ ಪ್ರವರ್ತಕರಾದ ಶ್ರೀಜಯತೀರ್ಥರು ಮತ್ತು ಶ್ರೀ ವ್ಯಾಸರಾಯರ ಕೃತಿಗಳಿಗೆ ಶ್ರೀ ರಾಘವೇಂದ್ರಗುರುಗಳು ವಿದ್ವತ್ಪೂರ್ಣ ವ್ಯಾಖ್ಯಾನ ಬರೆದಿದ್ದಾರೆ. ಶ್ರೀರಾಘವೇಂದ್ರಸ್ವಾಮಿಗಳು ಶ್ರೀಜಯತೀರ್ಥರು ರಚಿಸಿದ 'ನ್ಯಾಯಸುಧಾ' ಗ್ರಂಥಕ್ಕೆ 'ನ್ಯಾಯಸುಧಾ ಪರಿಮಳ' ಎಂಬ ಭಾಷ್ಯ ರಚಿಸಿದ್ದಾರೆ.

ಶ್ರೀ ರಾಘವೇಂದ್ರಸ್ವಾಮಿಗಳವರ ಬದುಕು ಮತ್ತು ಸಾಧನೆಯನ್ನು ಗಮನಿಸಿದಾಗ ಅದೊಂದು ಹೋರಾಟದ ಬದುಕಾಗಿ ಕಂಗೊಳಿಸುತ್ತದೆ. ಕ್ರಿ.ಶ.1595ರಲ್ಲಿ ತಮಿಳುನಾಡಿನ ಭುವನಗಿರಿಯಲ್ಲಿ ಜನಿಸಿದ ಶ್ರೀ ರಾಘವೇಂದ್ರಗುರುಗಳ ಪೂರ್ವಾಶ್ರಮದ ಹೆಸರು ಶ್ರೀ ವೆಂಕಟನಾಥ. ಇವರ ಮುತ್ತಜ್ಜ ಶ್ರೀ ಕೃಷ್ಣಭಟ್ಟರು ವಿಜಯನಗರ ಸಾಮ್ರಾಜ್ಯದ ಮಹಾನ್ ದೊರೆ ಶ್ರೀಕೃಷ್ಣದೇವರಾಯನ ಗುರುಗಳಾಗಿದ್ದವರು. ಇವರ ತಾತ ಕನಕಾಚಲಭಟ್ಟರು. ತಂದೆ ತಿಮ್ಮಣ್ಣಾಚಾರ್ಯರು. ತಾಯಿ ಗೋಪಿಕಾಂಬಿಕೆ. ಇವರ ವಂಶಕ್ಕೆ ಸಂಗೀತ ಮತ್ತು ವಿದ್ವತ್ತು ತಲೆತಲಾಂತರದಿಂದ ಬಂದ ಬಳುವಳಿಯಾಗಿದೆ. ಸ್ವತಃ ಶ್ರೀ ರಾಘವೇಂದ್ರಗುರುಗಳು ಬಹು ದೊಡ್ಡ ವೀಣಾವಾದಕರಾಗಿದ್ದರು.

ಶ್ರೀ ರಾಘವೇಂದ್ರಗುರುಗಳ ತಂದೆ ತಿಮ್ಮಣ್ಣಾಚಾರ್ಯ ಅವರೇ ಕುಟುಂಬವನ್ನು ಕುಂಭಕೋಣಂನಿಂದ ಕಂಚಿಗೆ ಸ್ಥಳಾಂತರ ಮಾಡಿದ್ದರು. ಅಂದು ಕಂಚಿ ಭಾರತದಲ್ಲೇ ಪ್ರಸಿದ್ಧವಾದ ವಿದ್ಯಾಕೇಂದ್ರ. ತಂದೆಯ ಅಕಾಲಿಕ ಮರಣದಿಂದಾಗಿ ವೆಂಕಟನಾಥ ಅವರಿಗೆ ಅವರ ಸೋದರಮಾವ ಶ್ರೀ ಲಕ್ಷ್ಮೀನರಸಿಂಹಾಚಾರ್ಯ ಅವರಿಂದ ಸಂಪೂರ್ಣವಾದ ಪಾಠ ನಡೆಯುತ್ತದೆ. ಪ್ರಾಪ್ತ ವಯಸ್ಸಿನಲ್ಲಿ ಸರಸ್ವತಿ ಎನ್ನುವ ಅನುರೂಪವತಿಯಾದ ಕನ್ಯೆಯೊಡನೆ ವಿವಾಹವು ನಡೆಯುತ್ತದೆ. ಈ ದಂಪತಿಗೆ ಮಗುವೊಂದು ಜನಿಸುತ್ತದೆ.

ರಾಘವೇಂದ್ರ ಶ್ರೀಗಳ ಸನ್ಯಾಸ ಸ್ವೀಕಾರದ ಸನ್ನಿವೇಶವು ಭಾರತೀಯ ಸಂಸ್ಕೃತಿಯ ಅತ್ಯುನ್ನತ ಮೌಲ್ಯದ ಪರಿಪಾಲನೆ ಮತ್ತು ಕುಟುಂಬದ ಸದಸ್ಯರ ಪರಸ್ಪರ ಬಾಂಧವ್ಯಕ್ಕೆ ನಿದರ್ಶನವಾಗುವ ಅಪರೂಪದ ಘಟನೆಯಾಗಿದೆ. ವ್ಯಕ್ತಿ ಕುಟುಂಬದ ಸುಖಕ್ಕಿಂತ ಸಮುದಾಯದ ಹಿತ ಮುಖ್ಯ ಎಂಬುದನ್ನು ಶ್ರೀ ರಾಘವೇಂದ್ರ ಸ್ವಾಮಿಗಳು ತಮ್ಮ ವೈಯಕ್ತಿಕ ಜೀವನದ ಘಟನೆಯೊಂದರ ಮೂಲಕ ತೋರಿಸಿ ಕೊಟ್ಟಿದ್ದಾರೆ.

ಅನೇಕ ಪರ್ಯಟನೆಗಳ ನಂತರ ಶ್ರೀ ವೆಂಕಟನಾಥ ಅವರು ಅರ್ಥಾತ್ ಶ್ರೀ ರಾಘವೇಂದ್ರಸ್ವಾಮಿಗಳು ಕ್ರಿ.ಶ.1624ರಲ್ಲಿ ಕುಂಭಕೋಣಂ ದ್ವೈತಮತದ ಪೀಠಾಧಿಪತಿಗಳಾಗುತ್ತಾರೆ. ಅವರಿಗೆ ದೀಕ್ಷೆ ನೀಡಿದ ಗುರುಗಳು ಶ್ರೀ ಸುಧೀಂದ್ರತೀರ್ಥರು.

ಶ್ರೀ ರಾಘವೇಂದ್ರ ಗುರುಗಳು ಪೀಠಾಧಿಪತಿಗಳಾದ ಮೇಲೆ ತಮ್ಮ ಮತದ ಸ್ಥಾಪಕರಾದ ಶ್ರೀಮಧ್ವಾಚಾರ್ಯರಂತೆ ವಿದ್ವತ್ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿದ್ದಾರೆ. ತಮ್ಮ 76 ವರ್ಷದ ಜೀವಿತಾವಧಿಯಲ್ಲಿ ಒಂದು ನಿಮಿಷವನ್ನೂ ವ್ಯರ್ಥ ಮಾಡದೇ ಸಾಧನೆ ಮಾಡಿದ ಹೆಗ್ಗಳಿಕೆ ರಾಯರದು. ಧಾರ್ಮಿಕ ಪೀಠದ ಮುಖ್ಯಸ್ಥರಾಗಿ ತಮ್ಮ ಅನುಯಾಯಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಧರ್ಮ ಪ್ರಸಾರಕ್ಕಾಗಿ ನಿರಂತರವಾಗಿ ಪ್ರವಾಸ ಮಾಡಿದ್ದಾರೆ. ಮೈಸೂರು ಒಡೆಯರ್ ವಂಶಸ್ಥರಾಗಿದ್ದ ದೊಡ್ಡ ದೇವರಾಜ ಒಡೆಯರ್ (ಕ್ರಿ.ಶ.1659–1704) ಅವರ ಕಾಲದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳು ಶ್ರೀರಂಗಪಟ್ಟಣದಲ್ಲಿ ಅವರನ್ನು ಭೇಟಿ ಮಾಡಿದ್ದರು.



ವಿಜಯನಗರ ಸಾಮ್ರಾಜ್ಯದ ಪತನಾನಂತರ ಇಡೀ ದಕ್ಷಿಣ ಭಾರತ ಸಣ್ಣ ಪುಟ್ಟ ಪಾಳೇಪಟ್ಟುಗಳಾಗಿ ಒಡೆದು ಛಿದ್ರ ಛಿದ್ರವಾಯಿತು. ಇವರುಗಳು ತಮ್ಮ ತಮ್ಮಲ್ಲೇ ಕಾದಾಡುತ್ತಾ ಪ್ರಜೆಗಳನ್ನು ಯುದ್ಧದಲ್ಲಿ ಬಲಿ ಕೊಡುತ್ತಿದ್ದರು. ಗೆದ್ದವರು ಸೋತ ರಾಜ್ಯದ ಮೇಲೆ ದಾಳಿ ಮಾಡುತ್ತಾ, ಲೂಟಿ, ಅತ್ಯಾಚಾರಗಳನ್ನು ಮಾಡುವುದು ತಮ್ಮ ಸಾಹಸವೆಂದು ಭಾವಿಸಿದ್ದರು. ಇಂತಹ ಸಂದರ್ಭದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳು ನಿರಂತರವಾಗಿ ಪ್ರವಾಸ ಮಾಡುತ್ತಾ ಜನರಲ್ಲಿ ಆತ್ಮಸ್ಥೈರ್ಯ ಕುಂದದಂತೆ ನೋಡಿಕೊಂಡರು. ಜನರಲ್ಲಿ ಧಾರ್ಮಿಕ ಭಾವನೆಯನ್ನು ಪೋಷಿಸುವಲ್ಲಿಯೂ ಅವರ ಅಮೂಲ್ಯವಾದ ಕೊಡುಗೆಯಿದೆ.

ಕ್ರಿ.ಶ.1671ರಲ್ಲಿ ಅದೋನಿ ಸಂಸ್ಥಾನವನ್ನು ಆಳುತ್ತಿದ್ದ ಸಿದ್ಧಿ ಮಸೂದ್ ಖಾನ್ ಅವನಿಂದ ಮಂಚಾಲೆ ಗ್ರಾಮವನ್ನು ಇನಾಂತಿಯಾಗಿ ಪಡೆಯುತ್ತಾರೆ. ಈ ಗ್ರಾಮಕ್ಕೆ ಸೇರಿದ ಸಮಸ್ತ ಸಂಪನ್ಮೂಲವು ಶ್ರೀ ರಾಘವೇಂದ್ರಸ್ವಾಮಿಗಳಿಗೆ ಸೇರತಕ್ಕದ್ದು ಎಂದು ಅದೋನಿ ನವಾಬನು ಶಾಸನ ಬರೆಸುತ್ತಾನೆ. ಅಲ್ಲೇ ಶ್ರೀರಾಘವೇಂದ್ರ ಸ್ವಾಮಿಗಳು ಸಜೀವವಾಗಿ ವೃಂದಾವನ ಪ್ರವೇಶಿಸುತ್ತಾರೆ.

ಶ್ರೀರಾಯರು ವೃಂದಾವನಸ್ಥರಾದ ಮೇಲೂ ತಮ್ಮ ಭಕ್ತರನ್ನು ಕರುಣೆಯಿಂದ ಸಲಹುತ್ತಿದ್ದಾರೆ ಎನ್ನುವ ಬಲವಾದ ನಂಬಿಕೆ ಭಕ್ತರಲ್ಲಿದೆ. ಅದಕ್ಕೆ ಉದಾಹರಣೆ ಎಂಬಂತೆ, ಸ್ವಾತಂತ್ರ್ಯಾಪೂರ್ವದಲ್ಲಿ ಬಳ್ಳಾರಿಯ ಕಲೆಕ್ಟರ್ ಆಗಿದ್ದ ಸರ್ ಥಾಮಸ್ ಮನ್ರೋ ಮಂತ್ರಾಲಯದ ಇನಾಂತಿ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆದಾಗ ಅವನಿಗೆ ವೃಂದಾವನದಲ್ಲೇ ದರ್ಶನ ನೀಡಿ ಈ ಮಠದ ಭೂಮಿಯನ್ನು ಹಿಂದಿರುಗಿಸುವಂತೆ ಸೂಚಿಸಿದ್ದಾರೆ. ಬಳ್ಳಾರಿ ಪ್ರಾಂತ್ಯ ಹಿಂದೆ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿತ್ತು. ಈ ಘಟನೆ 19ನೆಯ ಶತಮಾನದಲ್ಲಿ ಜರುಗಿದೆ. ಇದನ್ನು ಮದ್ರಾಸ್ ಗೆಜೆಟಿಯರ್‌ನಲ್ಲಿ ದಾಖಲು ಮಾಡಲಾಗಿದೆ.

ಶ್ರೀ ರಾಘವೇಂದ್ರ ಗುರುಗಳು ವೃಂದಾವನಸ್ಥರಾದ ನಂತರ ಸಾಕಷ್ಟು ಖ್ಯಾತಿ ಪಡೆದಿದ್ದಾರೆ. ಕನ್ನಡದ ಹರಿದಾಸರ ಮನಸ್ಸನ್ನು ಶ್ರೀ ರಾಘವೇಂದ್ರ ಗುರುಗಳು ಸೂರೆಗೊಂಡಷ್ಟು ಮತ್ತಾರೂ ಸೂರೆಗೊಂಡಿಲ್ಲ. ಶ್ರೀ ರಾಘವೇಂದ್ರ ಗುರುಗಳನ್ನು ಕುರಿತು ಪ್ರಕಟವಾದಷ್ಟು ಸಾಹಿತ್ಯ ಬೇರ್‍ಯಾವ ಯತಿಗಳ ವಿಚಾರದಲ್ಲೂ ಕಾಣಲು ಸಿಗುವುದಿಲ್ಲ. ಪ್ರಸನ್ನ ವೆಂಕಟದಾಸರು (ಕ್ರಿ.ಶ.1680), ವಿಜಯದಾಸರು (ಕ್ರಿ.ಶ.1682), ಗೋಪಾಲದಾಸರು (ಕ್ರಿ.ಶ.1722), ಜಗನ್ನಾಥದಾಸರು (ಕ್ರಿ.ಶ.1722), ಸುರಪುರದ ಆನಂದದಾಸರು– ಹೀಗೆ 17ನೆಯ ಶತಮಾನದ ನಂತರ ಬಂದ ಎಲ್ಲಾ ಹರಿದಾಸರು ಶ್ರೀರಾಘವೇಂದ್ರ ಗುರುಗಳ ಸ್ತೋತ್ರ ಮಾಡದೇ ಮುಂದೆ ಹೋದವರಲ್ಲ. ಶ್ರೀ ರಾಘವೇಂದ್ರಗುರುಗಳನ್ನು ಜನಮನದಲ್ಲಿ ಪ್ರತಿಷ್ಠಾಪಿಸಿದ ಕೀರ್ತಿ ಹರಿದಾಸರಿಗೆ ಮತ್ತು ಅವರ ಕೀರ್ತನೆಗಳನ್ನು ಮನತುಂಬಿ ಹಾಡಿರುವ ಸಂಗೀತಗಾರರಿಗೆ ಸಲ್ಲುತ್ತದೆ. ಸ್ವತಃ ಶ್ರೀರಾಘವೇಂದ್ರಸ್ವಾಮಿಗಳು ಪುರಂದರದಾಸರು ಮತ್ತು ಕನಕದಾಸರು ಹರಿದಾಸ ಪರಂಪರೆಯನ್ನು ಮುಂದುವರಿಸಿದ್ದಾರೆ. ಕನ್ನಡದಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳು ರಚಿಸಿರುವ ಏಕೈಕ ಕೀರ್ತನೆ 'ಇಂದು ಎನಗೆ ಗೋವಿಂದ' ಇದು ತುಂಬಾ ಜನಪ್ರಿಯವಾದ ಕೀರ್ತನೆ. ಅವರ ಅಂಕಿತನಾಮ 'ಧೀರವೇಣುಗೋಪಾಲ'.

ಆಧುನಿಕ ಕಾಲದಲ್ಲೂ ಶ್ರೀರಾಘವೇಂದ್ರ ಗುರುಗಳನ್ನು ಜನರ ಬಳಿಗೆ ಮತ್ತೆ ಕರೆದೊಯ್ಯಲು ಮಾಧ್ಯಮಗಳ ಪಾತ್ರ ಬಹಳ ದೊಡ್ಡದು. ಚಲನಚಿತ್ರ ಮತ್ತು ಟಿ.ವಿ. ಮಾಧ್ಯಮಗಳು ಶ್ರೀ ರಾಘವೇಂದ್ರ ಸ್ವಾಮಿಗಳ ಚರಿತ್ರೆಯನ್ನು ಜನಮಾನಸದಲ್ಲಿ ಬೇರೂರುವಂತೆ ಮಾಡಿವೆ. ಅದರಲ್ಲೂ ಕನ್ನಡದ ವರನಟ, ನಟಸಾರ್ವಭೌಮ ಡಾ.ರಾಜಕುಮಾರ್ ಅವರು ಅಭಿನಯಿಸಿದ 'ಶ್ರೀ ಮಂತ್ರಾಲಯ ಮಹಾತ್ಮೆ' ಚಲನಚಿತ್ರ ಜನರಲ್ಲಿ ಬೀರಿರುವ ಪ್ರಭಾವ ವರ್ಣಿಸಲು ಸಾಧ್ಯವಿಲ್ಲ. ಸ್ವತಃ ಡಾ.ರಾಜಕುಮಾರ್ ಶ್ರೀ ರಾಘವೇಂದ್ರಗುರುಗಳ ಪರಮ ಆರಾಧಕರು. ನಂತರ ಅನೇಕ ಕತೆಗಳು ಮತ್ತು ಪವಾಡಗಳು ಪ್ರಸಾರವಾಗಿ ಶ್ರೀ ರಾಘವೇಂದ್ರಸ್ವಾಮಿಗಳ ಕೀರ್ತಿ ಹೆಚ್ಚಾಗುವಂತೆ ಮಾಡಿದೆ.

ದಕ್ಷಿಣ ಭಾರತದಲ್ಲಿ ಹಿಂದೂ ಸಂಸ್ಕೃತಿಯನ್ನು ರಕ್ಷಿಸಲು 16ನೆಯ ಶತಮಾನದಲ್ಲಿ ಶ್ರೀ ವ್ಯಾಸರಾಯರು 754 ಕಡೆ ಶ್ರೀ ಆಂಜನೇಯಸ್ವಾಮಿಯನ್ನು ಪ್ರತಿಷ್ಠಾಪಿಸಿ, ಎಲ್ಲ ವರ್ಗದವರು ಆತನ ಆರಾಧನೆ ಮಾಡುವಂತೆ ಮಾಡಿದ್ದಾರೆ ಎಂಬ ಭಾವನೆ ಸಾಂಸ್ಕೃತಿಕ ಇತಿಹಾಸಕಾರರಲ್ಲಿದೆ. ಪ್ರಸ್ತುತ ಶ್ರೀರಾಘವೇಂದ್ರಸ್ವಾಮಿಗಳ ಮೃತ್ತಿಕಾ ವೃಂದಾವನ ದೇಶದ ಎಲ್ಲೆಡೆಯಿದೆ. ಅಷ್ಟೇಕೆ ಅಮೆರಿಕ, ಕೆನಡಾ

ಮೊದಲಾದ ದೇಶಗಳಲ್ಲೂ ರಾಯರ ವೃಂದಾವನವಿರುವುದು ಎಲ್ಲರಿಗೂ ತಿಳಿದ ವಿಚಾರ. ಶ್ರೀ ರಾಘವೇಂದ್ರ ಸ್ವಾಮಿಗಳ ಭಕ್ತರಿಗೆ ಜಾತಿಯ ಸಂಕೋಲೆ ಇಲ್ಲ. ಕೊನೆಗೆ ಧರ್ಮದ ಬಂಧನವೂ ಇಲ್ಲ. ಶ್ರೀರಾಘವೇಂದ್ರ ಸ್ವಾಮಿಗಳನ್ನು ಒಲಿಸಿಕೊಳ್ಳುವುದು ಸುಲಭ, ಅವರು ಮಹಾಕರುಣಾಳು, ಮಗುವಿನಿಂದ ಹಿಡಿದು ವೃದ್ಧರ ತನಕ ಅವರು ಎಲ್ಲರನ್ನೂ ಸಂತೈಸುವವರು ಎಂಬ ಭಾವನೆ ಬಹುಜನರಲ್ಲಿದೆ.

ಶ್ರೀರಾಘವೇಂದ್ರಸ್ವಾಮಿಗಳ ಜನಪ್ರಿಯತೆ ಎಷ್ಟೆಂದರೆ ಅವರು ವೃಂದಾವನಸ್ಥರಾದ ಎರಡೇ ವರ್ಷಕ್ಕೆ ಹೊನ್ನಾಳಿಯಲ್ಲಿ ಮೃತ್ತಿಕಾ ವೃಂದಾವನ ಅಸ್ತಿತ್ವಕ್ಕೆ ಬಂದಿದೆ. ಶ್ರೀ ರಾಘವೇಂದ್ರಸ್ವಾಮಿಗಳ ಮೃತ್ತಿಕಾ ವೃಂದಾವನ ನಮ್ಮ ಚನ್ನಗಿರಿ ನಗರದಲ್ಲೂ ಸ್ಥಾಪನೆಯಾಗಬೇಕು ಎಂಬ ಸಂಕಲ್ಪ ಮಾಡಿದವರು ಶಾನುಭೋಗ್ ದೊಡ್ಡ ನರಸಪ್ಪ ಮತ್ತು ಆಚಾರ್ಯ ಪರಂಪರೆಯ ಶ್ರೀ ಸ್ವಾಮಿರಾಯಾಚಾರ್ಯ ಅವರು. ಅವರಿಗೆ ನೂರಾರು ಕೈಗಳು ಸಹಾಯ ಮಾಡಿವೆ. ಅದರಲ್ಲೂ ವೃಂದಾವನ ಕೆತ್ತಿದ ಶಿಲ್ಪಿಯ ಕತೆ ರೋಚಕವಾಗಿದೆ. ಇದು ಶ್ರೀ ರಾಘವೇಂದ್ರಸ್ವಾಮಿಗಳ ಅಪಾರ ಕರುಣೆಗೆ ಸಾಕ್ಷ್ಯವಾಗಿದೆ. ಚನ್ನಗಿರಿ ರಾಯರಮಠದ ಚರಿತ್ರೆಯನ್ನು ಅರ್ಚಕರಾದ ಗುರುರಾಜಾಚಾರ್ಯರು 1973ರಲ್ಲಿ ಬರೆದಿಟ್ಟ ಮಾಹಿತಿ ದೊರೆಯುತ್ತದೆ. ಅದನ್ನು ಚನ್ನಗಿರಿ ಶ್ರೀ ಶಾಮಣ್ಣನವರು ನಂಜನಗೂಡು ಶ್ರೀಪರಿಮಳ ಪ್ರಕಾಶನದಿಂದ ಪ್ರಕಟಿಸುತ್ತಾರೆ. ಅದರ ಲೇಖಕರು ನಲ್ಲೂರುಕಟ್ಟೆ ಶ್ರೀ ರಾಘವೇಂದ್ರಾಚಾರ್ಯರು.

ಚನ್ನಗಿರಿಯಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳ ಮೃತಿಕಾ ವೃಂದಾವನದ ಪ್ರತಿಷ್ಠಾಪನೆಯ ಇತಿಹಾಸ ಭಕ್ತರಿಗೆ ಅನನ್ಯ ಶ್ರದ್ಧೆ ಹುಟ್ಟಿಸುವ ಘಟನೆಯಾಗಿದೆ. ಅಂತಿಮವಾಗಿ ಮಂತ್ರಾಲಯದಲ್ಲಿ ಆಗ ಪೀಠಾಧಿಪತಿಗಳಾಗಿದ್ದ ಶ್ರೀ ವರದೇಂದ್ರ ತೀರ್ಥರು (ಕ್ರಿ.ಶ.1761 ರಿಂದ 1783) ಸ್ವತ: ಚನ್ನಗಿರಿಗೆ ಬಂದು 06–02–1783ರ ಮಾಘಶುದ್ಧ ಪಂಚಮಿ ಗುರುವಾರ ರೇವತಿ ನಕ್ಷತ್ರದ ಶುಭ ಮಹೂರ್ತದಲ್ಲಿ ಮೃತ್ತಿಕಾ ವೃಂದಾವನವನ್ನು ಪ್ರತಿಷ್ಠಾಪನೆ ಮಾಡಿದ್ದಾರೆ.

ಶ್ರೀರಾಯರು ವೃಂದಾವನಸ್ಥರಾದ ಹನ್ನೆರಡು ವರ್ಷಕ್ಕೆ ಸರಿಯಾಗಿ ಚನ್ನಗಿರಿಯಲ್ಲಿ ಮೃತ್ತಿಕಾ ವೃಂದಾವನವಾಗಿರುವುದು ಅರ್ಥಪೂರ್ಣವಾಗಿದೆ. ಮಾಧ್ವ ಪರಂಪರೆಯಲ್ಲೂ 12 ಸಂಖ್ಯೆಗೆ ವಿಶೇಷವಾದ ಮಹತ್ವವಿದೆ. ಅಲ್ಲಿಂದ ನಿರಂತರವಾಗಿ ಶ್ರೀರಾಘವೇಂದ್ರಗುರುಗಳ ಪೂಜಾಕಾರ್ಯ ಮತ್ತು ಆರಾಧನೆ ನಿರ್ವಿಘ್ನವಾಗಿ ನಡೆದುಕೊಂಡು ಬರುತ್ತಿರುವುದು ಈ ಸ್ಥಳ ಐದನೆಯ ಮಂತ್ರಾಲಯ ಎಂಬ ವಿಶೇಷತೆಯನ್ನು ದೃಷ್ಟಾಂತದ ಮೂಲಕ ಸಾಬೀತುಪಡಿಸಿದಂತೆ ಆಗಿದೆ.



ಚನ್ನಗಿರಿಯಲ್ಲಿ ಪ್ರತಿಷ್ಠಾಪನೆಯಾಗಿರುವ ವೃಂದಾವನದ ನಾಲ್ಕು ಕಡೆಗಳಲ್ಲಿ ಕಾಳಿಂಗಮರ್ದನ ಕೃಷ್ಣ, ಯೋಗಾನರಸಿಂಹ, ವೇದವ್ಯಾಸ, ಕೋದಂಡ ರಾಮ ಮೊದಲಾದ ದೇವರ ವಿಗ್ರಹಗಳನ್ನು ಸುಂದರವಾಗಿ ಬಿಡಿಸಲಾಗಿದೆ.

### ಶ್ರದ್ಧಾಕೇಂದ್ರವಾಗಿರುವ ರಾಯರ ಮಠ

ಚನ್ನಗಿರಿಯ ಶ್ರೀರಾಘವೇಂದ್ರ ಸ್ವಾಮಿಗಳ ಮೃತ್ತಿಕಾ ವೃಂದಾವನದಲ್ಲಿ ದಿನನಿತ್ಯ ಪೂಜಾವಿಧಿಗಳು ಮತ್ತು ಆರಾಧನಾಕಾರ್ಯಗಳು ಯಶಸ್ವಿಯಾಗಲು ಅನೇಕ ಹಿರಿಯರ ದುಡಿಮೆ ಕಾರಣವಾಗಿದೆ. ಅವರಲ್ಲಿ ಕೆಲವರನ್ನು ಜ್ಞಾಪಿಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯ. ಶ್ರೀ ಅನಂತಕೃಷ್ಣಾಚಾರ್ಯರು (1957), ಶ್ರೀ ಎನ್.ನಾರಾಯಣ ಜೋಯಿಸ್ (1961–1973 ರಿಂದ 1987), ಶ್ರೀ ಸಿ.ಎಸ್. ವೆಂಕಟರಾವ್ (1969), ಶ್ರೀ ಎನ್.ತಮ್ಮಣ್ಣ (1987), ಶ್ರೀ ಸಿ.ಜೆ.ವೆಂಕಟೇಶ್ (1990), ಶ್ರೀ ಎಂ.ನಾಗರಾಜ್ (1996).

2002ರಿಂದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಕನ್ವೀನರ್ ಆಗಿರುವ ಶ್ರೀ.ಪಿ.ಎಂ. ಕೃಷ್ಣ ಉಪಾಧ್ಯ ಅವರು ಹಳೆಯ ಮಠಕ್ಕೆ ನಾವೀನ್ಯತೆ ಕೊಡಲು ಪ್ರಯತ್ನ ನಡೆಸಿ ಯಶಸ್ವಿಯಾಗಿದ್ದಾರೆ. ಜೀರ್ಣೋದ್ಧಾರಗೊಂಡ ನೂತನ ಆಲಯದ ಉದ್ಘಾಟನೆ ಹಾಗೂ ಪುನರ್ ಪ್ರತಿಷ್ಠಾಪನೆಯನ್ನು ಶ್ರೀರಾಘವೇಂದ್ರ ಮಠದ ಪೀಠಾಧಿಪತಿಗಳಾಗಿರುವ ಶ್ರೀ ಸುಬುಧೇಂದ್ರ ತೀರ್ಥರು 25–04–2022 ರಂದು ವೈಭವದಿಂದ ನೆರವೇರಿಸಿದರು.

ಈ ವರ್ಷ ಆಗಸ್ಟ್ 31ರಿಂದ ಸೆಪ್ಟೆಂಬರ್ 3ನೆಯ ತಾರೀಖಿನವರೆಗೆ ಚನ್ನಗಿರಿಯ ಶ್ರೀಮಠದಲ್ಲಿ ಶ್ರೀರಾಘವೇಂದ್ರಸ್ವಾಮಿಗಳ ಆರಾಧನಾ ಮಹೋತ್ಸವ ಕಾರ್ಯಕ್ರಮ ಜರುಗುತ್ತದೆ.

ಇಂದಿಗೂ ಪ್ರತಿವರ್ಷ ಶ್ರೀ ಚನ್ನಗಿರಿ ಶಾಮಣ್ಣ ಟ್ರಸ್ಟ್ ವತಿಯಿಂದ ಮಾಘ ಶುದ್ಧ ಪಂಚಮಿಯೆಂದು "ವರ್ಧಂತಿ" ಉತ್ಸವವಾಗಿ ಆಚರಿಸಲಾಗುತ್ತಿದೆ. ವೇದಮೂರ್ತಿ ಕೇಶವಾಚಾರ್ಯರು ಪ್ರಧಾನ ಆರ್ಚಕರಾಗಿ ಎಲ್ಲಾ ವಿಧಿ ವಿಧಾನಗಳನ್ನು, ಪೂಜಾ ಕೈಂಕರ್ಯವನ್ನು ನಡೆಸುತ್ತಿದ್ದಾರೆ. ಪ್ರತಿದಿನ ನೂರಾರು ಭಕ್ತರು ಮತ್ತು ಆರಾಧನೆಯ ಸಂದರ್ಭದಲ್ಲಿ ಸಾವಿರಾರು ಭಕ್ತರು ಶ್ರೀಮಠಕ್ಕೆ ಭೇಟಿ ನೀಡಿ ರಾಯರ ಕೃಪೆಗೆ ಪಾತ್ರರಾಗುತ್ತಾರೆ.

**▪ ಮಾಹಿತಿ ಸಂಗ್ರಹ ಮತ್ತು ನಿರೂಪಣೆಯಲ್ಲಿ ನೆರವು: ಎನ್.ಭಾರತಿ, 98865 00570**

# ಮಗುವಿನ ಉಜ್ವಲ ಭವಿಷ್ಯಕ್ಕೆ ತಾಯಿಯ ಎದೆಹಾಲು ಅತ್ಯುತ್ತಮ ಆಹಾರ

"ಮಗುವಿನ ಸರ್ವತೋಮುಖ ಬೆಳವಣಿಗೆಗೆ ತಾಯಿಯ ಎದೆಹಾಲು ಪೂರಕವಾಗಿರುತ್ತದೆ. ಮಗು ಜನಿಸಿದ ಗಂಟೆಯೊಳಗೆ ಎದೆ ಹಾಲನ್ನು ಉಣಿಸಬೇಕು. ಮಗುವಿಗೆ ತಾಯಿ ಎದೆಹಾಲು ನೀಡುವುದು ಕೇವಲ ಅದರ ತಾಯಿಯ ಜವಾಬ್ದಾರಿಯಾಗಿರದೆ, ಅದರ ಕುಟುಂಬ, ಆರೋಗ್ಯ ಕಾರ್ಯಕರ್ತರು ಹಾಗೂ ಸಮುದಾಯದ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಮಗುವಿನ ಆರೋಗ್ಯ ಸುಧಾರಣೆ ಹಾಗೂ ಉಜ್ವಲ ಭವಿಷ್ಯಕ್ಕೆ ತಾಯಿಯ ಎದೆಹಾಲು ಅತ್ಯುತ್ತಮ ಪೋಷಕಾಂಶವುಳ್ಳ ಆಹಾರವಾಗಿದೆ" ಎಂದು ಬೆಂಗಳೂರಿನ ಅಪೋಲೊ ಕ್ರೇಡಲ್ ಆಸ್ಪತ್ರೆಯ ಹಾಲುಣಿಸುವ ಸಲಹೆಗಾರರಾದ ಡಾ.ಸುಮಿರಾ ಮುಬೀನ್‌ರವರು ತಿಳಿಸಿದರು. ಅವರು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ 'ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ'ವನ್ನು ಆಗಸ್ಟ್ 7 ರಂದು ಉದ್ಘಾಟಿಸಿ ತಮ್ಮ ಭಾಷಣದಲ್ಲಿ ಹೇಳಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್ ಅವರು ಮಾತನಾಡುತ್ತಾ "ಮಗುವಿನ ಆರೋಗ್ಯ ಸುಧಾರಣೆಗೆ ತಾಯಿಯ ಎದೆಹಾಲು ತುಂಬಾ ಶ್ರೇಷ್ಠವಾಗಿದ್ದು, ತಾಯಿಯ ಎದೆಹಾಲನ್ನು ಕಡ್ಡಾಯವಾಗಿ ಮಗುವಿಗೆ ಕೊಡುವುದರಿಂದ ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದರೊಂದಿಗೆ ಮಾನಸಿಕವಾಗಿ ಸದೃಢತೆ ದೊರೆಯುತ್ತದೆ. ಇದರಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಅದಕ್ಕಾಗಿ ಈ ಅಭಿಯಾನದಲ್ಲಿ ಎಲ್ಲರೂ ಸಹಕರಿಸಬೇಕು" ಎಂದು ಕರೆ ನೀಡಿದರು.




**ಚಿತ್ರದಲ್ಲಿ ಬೆಂಗಳೂರಿನ ಅಪೋಲೊ ಕ್ರೇಡಲ್ ಆಸ್ಪತ್ರೆಯ ಹಾಲುಣಿಸುವ ಸಲಹೆಗಾರರಾದ ಡಾ.ಸುಮಿರಾ ಮುಬೀನ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್, ಉಪಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.**

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್ ಅವರು "ತಾಯಿಯ ಎದೆಹಾಲಿನಲ್ಲಿ ಶಿಶುವಿನ ಸದೃಢ ಬೆಳವಣಿಗೆಗೆ ಪೂರಕವಾದ ಅಂಶಗಳು ಅಡಕವಾಗಿರುತ್ತವೆ ಹಾಗೂ ತಾಯಿಯ ಎದೆಹಾಲಿನಲ್ಲಿ ಮಗುವಿಗೆ ಬೇಕಾದ ಎಲ್ಲಾ ಅಗತ್ಯ ಪೌಷ್ಟಿಕಾಂಶಗಳು ದೊರೆಯುತ್ತವೆ" ಎಂದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಉಪಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ ಅವರು "ಪ್ರತಿಯೊಬ್ಬ ತಾಯಿಯೂ ತನ್ನ ಮಗುವಿಗೆ ಎದೆಹಾಲನ್ನು ಉಣಿಸುವ ಮೂಲಕ ದೇಶದಲ್ಲಿ ಆರೋಗ್ಯವಂತ ಪ್ರಜೆಯನ್ನಾಗಿ ರೂಪಿಸುವ ಜವಾಬ್ದಾರಿ ಹೊರಬೇಕು. ಎದೆಹಾಲಿನ ಮಹತ್ವ ಮತ್ತು ತಾಯಂದಿರು ಅದನ್ನು ಅನುಸರಿಸಬೇಕಾದ ಕ್ರಮಗಳ ಬಗ್ಗೆ ತಿಳಿದುಕೊಳ್ಳಬೇಕು. ತಾಯಿ ತನ್ನ ಎದೆಹಾಲನ್ನು ಕಡ್ಡಾಯವಾಗಿ ಮಗುವಿಗೆ ಕೊಡುವುದರಿಂದ ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ ಸ್ವತ: ತಾಯಿ ಅನೇಕ ಕಾಯಿಲೆಗಳಿಂದ ಪಾರು ಆಗುವ ಸಾಧ್ಯತೆಯಿದೆ' ಎಂದರು.

ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯ ಅವರು "ಪ್ರತಿಯೊಬ್ಬ ತಾಯಿಯೂ ತನ್ನ ಮಗುವಿಗೆ ಎದೆಹಾಲನ್ನು ಉಣಿಸುವ ಮೂಲಕ ಅದನ್ನು ಆರೋಗ್ಯವಂತ ಪ್ರಜೆಯನ್ನಾಗಿ ರೂಪಿಸಬೇಕು. ಎದೆಹಾಲಿನ ಮಹತ್ವ ಮತ್ತು ತಾಯಂದಿರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು" ಎಂದರು.

ಈ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮಕ್ಕೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಮತ್ತು ಶ್ರೀದೇವಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್ ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು, ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor in Chief: **Dr M R Hulinaykar**